ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಐದೂ ಗಂಟೆಯಾಗಿದೆ. ಬೆಳಿಗ್ಗೆ ೧೧ ಗಂಟೆಯಿಂದ ಕುಳಿತಿದ್ದೇವೆ.

ಅಧ್ಯಕ್ಷರು.—ಬರಗಾಲ ಎಷ್ಟು ಮಹತ್ವದ ವಿಷಯವೆಂದು ಅವಕಾಶ ಕೊಟ್ಟಿದ್ದೇನೆ. ಶ್ರೀ ಎನ್. ಹೆಚ್. ಗೌಡ ಅವರೇ ನೀವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಟೈಮ್ ಇದೆ. ಅವರು ಕೊಟ್ಟ ಹೇಳಿಕೆ ಪ್ರಕಾರ ನಾನು ಕೇಳಿದ್ದೇನೆ.

ಅಧ್ಯಕ್ಷರು.—ಅರು ಗಂಟೆಗೆ

ರಾಜ್ಯದಲ್ಲಿ ತಲೆದೋರಿರುವ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ (ಮುಂದುವರೆದುದು)

† ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕದಲ್ಲಿ ಈ ನಾಲ್ಕು ವರ್ಷಗಳ ಕಾಲ ಭೀಕರವಾದ ಬರಗಾಲ ಇದ್ದಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ಸದನದಲ್ಲಿ ನಡೆದ ಚರ್ಚೆ ತುಂಬಾ ಅಮೂಲ್ಯ ಹಾಗೂ ಅರ್ಥಗರ್ಭಿತ. ಭಾರತದ ಒಕ್ಕಲುತನಕ್ಕೆ ನಿಜವಾಗಿಯೂ ಒಂದು ಹೆಸರು ಬಂದಿದೆ. ಭಾರತದ ಒಕ್ಕಲುತನ ಎಂದರೆ ಮಾನ್‌ಸೂನ್, ಗಾಳಿಯ ಜೂಜಾಟ ಎಂದು. ಇದು ಸತ್ಯವಾದ ಸಂಗತಿ. ಆದರೆ ಈ ಸಂಗತಿ ಇವತ್ತಿಗೂ ಸತ್ಯವಾಗುತ್ತಿದೆ. ಮಾನ್‌ಸೂನ್ ಗಾಳಿ ನಿಜಕ್ಕೂ ನಾವು ಭಾವಿಸಿದಂತೆ ಬೀಸುತ್ತದೆ, ಮಳೆಯನ್ನು ತರುತ್ತದೆ ಎನ್ನುವ ಭರವಸೆ ಇಲ್ಲ.

ಹೇಗೆ ಜೂಜು ಆಡುವವ ಗೆಲ್ಲಬಹುದು ಅಥವಾ ಸೋಲಬಹುದೋ, ಅದೇ ರೀತಿಯಲ್ಲಿ ಮಾನ್‌ಸೂನ್ ಗಾಳಿಯನ್ನು ನಂಬಿಕೊಂಡು ಭಾರತದ ರೈತರು ತಮ್ಮ ಉದ್ಯೋಗದಲ್ಲಿ ಗೆಲ್ಲಬಹುದು ಅಥವಾ ಸೋಲಬಹುದು. ಇತ್ತೀಚಿನ ದಿನಗಳಲ್ಲಿ ನೋಡುವುದಾದರೆ, ಗೆಲುವಿಗಿಂತ ಸೋಲೇ ಜಾಸ್ತಿಯಾಗಿದೆ. ಭಾರತದ ರೈತ ಎಂತಹ ರಸಾತಳಕ್ಕೆ ಹೋಗಿದ್ದಾನೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ, ಕನ್ನಡದ ಮಹಾಕವಿ ಕುವೆಂಪುರವರು ಧನ್ವಂತರಿ ಎನ್ನುವ ಕಥೆಯಲ್ಲಿ ಭಾರತದ ರೈತನ, ಚಿಂತಾಜನಕ ಪರಿಸ್ಥಿತಿಗೆ ಕಾರಣವನ್ನು ಚಿತ್ರಿಸುತ್ತಾರೆ. ಒಂದು ದಿನ ದೇವವೈದ್ಯನಾದ ಧನ್ವಂತರಿ ಮೃಷ್ಟಾನ್ನ ಭೋಜನ ಮಾಡಿ, ಮಧ್ಯಾಹ್ನದ ಸಮಯದಲ್ಲಿ ಉಚ್ಚಾಸನದಲ್ಲಿ ಕುಳಿತುಕೊಂಡು, ವಿಚಾರ ಮಾಡುತ್ತಾ, ಇರತಕ್ಕ ಸಂದರ್ಭದಲ್ಲಿ ಒಂದು ನರಳುವಿಕೆ ಕೇಳಿ ಬರುತ್ತದೆ. ‘‘ಅಯ್ಯೋ ಸತ್ತೆ’’ ಎಂದು ಕೇಳಿ ಬರುತ್ತದೆ. ಧನ್ವಂತರಿಗೆ ಬಹಳ ಆಶ್ಚರ್ಯವಾಗುತ್ತದೆ. ದೇವ ವೈದ್ಯ ಯಾರೋ ನರಳುತ್ತಿದ್ದಾರೆ, ಅವರಿಗೆ ಚಿಕಿತ್ಸೆಯನ್ನು ಕೂಡಲೇ ಕೊಡಬೇಕೆಂದು ಆ ಕಡೆಯಿಂದ, ಈ ಕಡೆಯಿಂದ ನೋಡುತ್ತಾ, ಆ ನರಳುವಿಕೆ ಎಲ್ಲಿಂದ ಬರುತ್ತದೆ ಎಂಬುದನ್ನು ಆಲಿಸುತ್ತಾನೆ. ಆದರೆ ದೇವಲೋಕದಲ್ಲಿ ನರಳುವಿಕೆ ಎಲ್ಲಿಯೂ ಕೇಳುವುದಿಲ್ಲ, ನಂತರ, ಅಲ್ಲಿಂದ ಭೂಲೋಕಕ್ಕೆ ಬರುತ್ತಾನೆ. ಭೂಲೋಕದಲ್ಲಿ ನರಳುವಿಕೆ ಜೋರಾಗಿ ಕೇಳಿಬರುತ್ತದೆ. ಅಮೆರಿಕಾ, ಜಪಾನ್, ರಷ್ಯಾ ಮುಂತಾದ ಕಡೆ ಕೇಳುವುದಿಲ್ಲ, ಭಾರತದ ಈ ನರಳುವಿಕೆ ಇನ್ನಷ್ಟು ಜೋರಾಗಿ ಕೇಳಿಸುವುದಕ್ಕೆ ಪ್ರಾರಂಭವಾಯಿತು. ‘‘ಅಯ್ಯೋ ಸತ್ತೆ’’ ನನ್ನನ್ನು ಉಳಿಸಿ ಎಂದು. ಈ ನರಳುವಿಕೆ ಎಲ್ಲಿ ಎಂದು ಹುಡುಕಿಕೊಂಡು ಹೋದಾಗ, ಅಲ್ಲಿ ಒಂದು ಹಳ್ಳಿ, ಅಲ್ಲಿ ಒಂದು ಮುರುಕು ಗುಡಿಸಲು. ಅಲ್ಲಿ ಎಷ್ಟೋ ದಿವಸಗಳಿಂದ ಊಟ ಇಲ್ಲದೆ. ಅಂಗಾತ ಬಿದ್ದ ರೈತ. ಅವನ ಎದೆ ಮತ್ತು ಹೊಟ್ಟೆಯ ಮೇಲೆ ಸಣ್ಣ ಗುಂಪಾಸ್ತಸಂದ ಹಿಡಿದು, ದೊಡ್ಡ ದೊಡ್ಡ ಮಂತ್ರಿಗಳವರೆಗೆ ಪುಂಖಾನುಪುಂಖವಾಗಿ ಜನ ನಿಂತಿದ್ದಾರೆ. ಈ ಭಾರವನ್ನು ತಾಳಿಕೊಂಡು ರೈತ ಇದ್ದಾನೆ. ಇಂತಹ ಒಂದು ಪರಿಸ್ಥಿತಿಯಲ್ಲಿ ರೈತ ಭೀಕರವಾದ ಬರಗಾಲಕ್ಕೆ ತುತ್ತಾಗಿದ್ದಾನೆ. ಅವನಿಗೆ ಅರಿವು ಇದೆಯೇ. ಬರಗಾಲದ ಪರಿಸ್ಥಿತಿ ಏನಿದೆ, ತನ್ನ ಕತೆ ಏನಾಗಿ, ಮಕ್ಕಳ ಸ್ಥಿತಿ ಏನು ಎನ್ನುವಂಥ ಅರಿವು ಕೂಡ ಇಲ್ಲ. ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಕೂಡ ಅವನನ್ನು ಅಜ್ಞಾನಿಯನ್ನಾಗಿ ಮಾಡಿದ್ದೇವೆ. ಅವನು ಇನ್ನೂ ಮೌಢ್ಯದಲ್ಲಿದ್ದಾನೆ. ತನ್ನ ಪರಿಸ್ಥಿತಿಯ ಅರಿವು ಇಲ್ಲ. ಮುಂದೆ ಒದಗಬಹುದಾದ ಭೀಕರ ಪರಿಸ್ಥಿತಿಯ ಅರಿವು ಇಲ್ಲದೆ ನರಳುತ್ತಿದ್ದಾನೆ. ನಾವು ನಿಜವಾಗಿಯೂ ಅವನ ಉದ್ಧಾರಕ್ಕಾಗಿ, ಅವನಿಗೆ ಆಗಬೇಕಾದ ಕೆಲಸಕಾರ್ಯಗಳ ಒಳ್ಳೆಯ ವಾತಾವರಣಕ್ಕಾಗಿ ಇವತ್ತು ಚರ್ಚೆ ನಡೆಸುತ್ತಿದ್ದೇವೆ. ಇದು ಫಲಕಾರಿಯಾದರೆ ಒಳ್ಳೆಯದು, ಒಂದುವೇಳೆ ನಾವು ಇಷ್ಟು ಕಾಲ ನಡೆಸುವಂಥ ಚರ್ಚೆಯಿಂದ ಯಾವುದೂ ಫಲಕಾರಿ ಆಗದೇ

ಹೋದರೆ, ನಿಜವಾಗಿಯೂ ಇದೊಂದು, ದುರಾದೃಷ್ಟ ಸಂಗತಿ ಎಂದು ನನಗನ್ನಿಸುತ್ತದೆ. ನಮ್ಮ ದೇಶದಲ್ಲಿ ನೀರಾವರಿ ಬೆಳೆ ಬರುವಂತ ಭೂಮಿ ಶೇಕಡ ೧೯ರಷ್ಟು ಮಾತ್ರ ನಮ್ಮ ಕರ್ನಾಟಕದಲ್ಲಿ ತುಸು ಜಾಸ್ತಿ ಎಂದು ಹೇಳಬಹುದು. ಇವತ್ತು ನೀರಾವರಿಯನ್ನು ಸಾಕಷ್ಟು ಅಭಿವೃದ್ಧಿ ಮಾಡಿದೆವು ಎಂದರೆ ಒಳ್ಳೆಯ ಬೆಳೆ ಬರುತ್ತದೆ. ನಮ್ಮಲ್ಲಿ ಶೇಕಡ ೨೨ರಷ್ಟು ಮಾತ್ರ ನೀರಾವರಿ ಭೂಮಿ ಇದೆ. ಉಳಿದ ೭೮ರಷ್ಟು ನೀರಾವರಿ ಇಲ್ಲದೆ, ಕೇವಲ ಮಳೆಯನ್ನೇ ಅವಲಂಬಿಸಿ ಬೆಳೆಯಬೇಕಾಗಿದೆ. ಇದು ನಿಜವಾಗಿಯೂ ಹೀನಾಯವಾದ ಪರಿಸ್ಥಿತಿ.

ಶ್ರೀ–೩೦ ಪಿ.ಎಂ.

ಇದು ನಮ್ಮ ದುಸ್ಥಿತಿಯನ್ನು ತೋರಿಸುತ್ತದೆ. ಇಲ್ಲಿಯವರೆಗೂ ಕೂಡಾ ನಾವು ಇದರ ಬಗ್ಗೆ ಅಲೋಚನೆ ಮಾಡಲಿಲ್ಲ. ಬರಗಾಲ ಬರಬಹುದಾದಂಥ ಒಂದು ವಿಚಾರವನ್ನು ಕುರಿತು ನಾವು ವಿಚಾರ ಮಾಡಲಿಲ್ಲ, ನಾವು ಯಾವಾಗಲೂ ಸಮೃದ್ಧಿಯಾಗಿ ಬೆಳೆಯನ್ನು ತೆಗೆದುಕೊಳ್ಳಬಹುದೆಂಬ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದೆವು. ನಿಜವಾಗಿಯೂ ಭಾರತದಂತಹ ನದಿ ಸಂಪತ್ತಿರುವ ದೇಶದಲ್ಲಿ ಮನಸ್ಸು ಮಾಡಿ ಎಲ್ಲಾ ಜಲಾನಯನ ಪ್ರದೇಶಗಳನ್ನೂ ನಾವು ಉಪಯೋಗ ಮಾಡಿಕೊಂಡಿದ್ದರೆ ಇವತ್ತು ಇಂತಹ ಒಂದು ಪರಿಸ್ಥಿತಿಯನ್ನು ನಾವು ಎದುರು ನೋಡಬೇಕಾದ ಪ್ರಸಂಗ ಬರುತ್ತಿರಲಿಲ್ಲ. ಆದರೆ ನಾವು ಹಾಗೇ ಮಾಡದೇ, ವಂಚಿತರಾಗಿದ್ದೇವೆ. ನಮ್ಮನ್ನು ನಾವು ವಂಚನೆ ಮಾಡಿಕೊಂಡಿದ್ದೇವೆ. ಕರ್ನಾಟಕದಂಥ ಹೊನ್ನು ಬೆಳೆಯುವಂಥ ನಾಡಿಯನಲ್ಲಿ ಇವತ್ತು ಇಂಥ ಭೀಕರವಾದ ಬರಗಾಲ ಬಂತು ಎಂದರೆ ನಿಜವಾಗಿಯೂ ಇದು ದುಃಖದ ಸಂಗತಿ ಈ ನಾಲ್ಕು ವರ್ಷಗಳಲ್ಲಿ ಎಂತಹ ಪರಿಸ್ಥಿತಿ ನಮ್ಮ ಕರ್ನಾಟಕದಲ್ಲಿ ಉಂಟಾಗಿದೆ ಎಂದರೆ, ೧೭೫ ತಾಲ್ಲೂಕುಗಳ ಪೈಕಿ ೧೪೨ ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲ ಇದೆ ಎಂದರೆ ಇದು ನಿಜವಾಗಿಯೂ ಶೋಚನೀಯವಾದ ಸಂಗತಿ ಎಂದು ಹೇಳಬೇಕಾಗಿದೆ. ನಾನು ಕರ್ನಾಟಕದ ಮೂಲೆ ಮೂಲೆಗೂ ಹೋಗಿ ಜನರ ಸ್ಥಿತಿಗತಿಗಳನ್ನು ಚೆನ್ನಾಗಿ ಅಭ್ಯಾಸ ಮಾಡದೇ ಇದ್ದರೂ ನನ್ನ ಜಿಲ್ಲೆಯನ್ನು ನಾನು ಚೆನ್ನಾಗಿ ಕಂಡಿದ್ದೇನೆ. ನನ್ನ ಜಿಲ್ಲೆಯ ಜನಗಳ ಸ್ಥಿತಿ, ಜಾನುವಾರುಗಳ ಸ್ಥಿತಿಯನ್ನು ನಾನು ಚೆನ್ನಾಗಿ ಅಭ್ಯಾಸ ಮಾಡಿದ್ದೇನೆ. ನನ್ನ ಜಿಲ್ಲೆಯಾದ ಉತ್ತರಕನ್ನಡ ಜಿಲ್ಲೆಯಲ್ಲಿ ನಿಜವಾಗಿಯೂ ಬರಗಾಲವನ್ನೇ ಕಂಡಿರಲಿಲ್ಲ. ನಾಲ್ಕು ವರ್ಷಗಳ ಹಿಂದೆ ನೆರೆಹಾವಳಿ ಉಂಟಾಗಿತ್ತೇ ಹೊರತು ಬರಗಾಲ ಕಾಲಿಟ್ಟಿರಲಿಲ್ಲ ಇಂತಹ ಉತ್ತರಕನ್ನಡ ಜಿಲ್ಲೆಯಲ್ಲಿ ಇವತ್ತು ಬರಗಾಲ ಹೆಜ್ಜೆ ಇಡುತ್ತಿದೆ ಎಂದರೆ ಶೋಚನೀಯವಾದುದು. ನಮ್ಮ ಉತ್ತರಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ಪ್ರಖ್ಯಾತ ಕವಿಯಾದ ದಿವಂಗತ ದಿನಕರ ದೇಸಾಯಿಯವರು ಒಂದು ಮಾತನ್ನು ಹೇಳಿದ್ದಾರೆ. ''ಯಾರಪ್ಪ ಯಾರವ್ವನ ಇಚ್ಛೆ, ಉತ್ತರ ಕನ್ನಡ ಜಿಲ್ಲೆಯ ಕಚ್ಚೆ'' ಎಂದು. ಉತ್ತರ ಕನ್ನಡ ಜಿಲ್ಲೆಯ ಕಚ್ಚೆ ಎಂದರೆ ಬಡತನ ಯಾರಪ್ಪನ, ಯಾರವ್ವನ ಇಚ್ಛೆಯೋ ಗೊತ್ತಿಲ್ಲ. ಆದರೆ ಅಂತಹ ಪರಿಸ್ಥಿತಿ ಅಲ್ಲಿ ಉಂಟು. ಇವತ್ತೂ ಕೂಡಾ ಜನರು ಅಲ್ಲಿ ಕಚ್ಚೆಯ ಮೇಲೆ ತಮ್ಮ ಜೀವಮಾನವನ್ನು ಕಳೆಯುತ್ತಿದ್ದಾರೆ. ಇಂತಹ ಸ್ಥಿತಿ ಇವತ್ತೂ ಕೂಡಾ ಇದೆ. ಇವತ್ತು ಬರಗಾಲ ಬಂದು ಅವರ ಸ್ಥಿತಿ ಇನ್ನೂ ಹದಗೆಟ್ಟಿದೆ. ಇನ್ನೂ ಎಂತಹ ಸ್ಥಿತಿ ಬರಬಹುದೋ ಗೊತ್ತಿಲ್ಲ. ಅನ್ನದಾತ ಎನಿಸಿಕೊಂಡ ರೈತ, ದೇಶದ ಬೆನ್ನೆಲುಬು ಎನಿಸಿಕೊಂಡ ರೈತ ಇಂತಹ ಕೆಟ್ಟ ಪರಿಸ್ಥಿತಿಗೆ ಗುರಿಯಾದಂತಹ ಸ್ಥಿತಿಯನ್ನು ನೋಡಿದರೆ ಬಹಳ ದುಃಖ ಎನಿಸುತ್ತದೆ. ಎಷ್ಟು ಬೇಗ ರೈತನಿಗೆ ಉಂಟಾಗಿರುವ ಈ ಪರಿಸ್ಥಿತಿಯನ್ನು ಹೋಗಲಾಡಿಸುತ್ತೇವೋ, ರೈತನಿಗೆ ಬೇಕಾದಂಥ ಬೀಜ ಗೊಬ್ಬರ ಉಪಕರಣಗಳನ್ನು ಪೂರೈಸುತ್ತೇವೋ ಆಗ ದೇಶ ಅಭಿವೃದ್ಧಿಯಾಗುತ್ತದೆ ಈ ಪರಿಸ್ಥಿತಿ ಹೋಗುತ್ತದೆ. ಎಲ್ಲದಕ್ಕಿಂತ ಮುಖ್ಯವಾಗಿ ಬರಗಾಲಕ್ಕೆ ಕಾರಣವಾದ ಮಳೆ ಬರದಿರುವಂತಹ ಪರಿಸ್ಥಿತಿಗೆ ಏನು ಕಾರಣ ಎಂಬುದನ್ನು ವಿಚಾರ ಮಾಡಿದರೆ ನನಗನ್ನಿಸುತ್ತದೆ, ನಾವು ನಿಸರ್ಗದ ಮೇಲೆ ಒಂದು ಕ್ರೌರ್ಯವನ್ನು ದುಷ್ಟತನವನ್ನು ತೋರಿಸಿದ್ದೇವೆ. ಎಂದರೆ ನಮ್ಮ ಅರಣ್ಯವನ್ನು ನಾವು ನಾಶ ಮಾಡಿದ್ದೇವೆ. ಅರಣ್ಯವನ್ನು ನಾಶ ಮಾಡಿ ಇವತ್ತು ಮಳೆ ಬಾರದಿರುವಂತಹ ಒಂದು ಪರಿಸ್ಥಿತಿಯನ್ನು ನಾವು ತಂದುಕೊಂಡಿದ್ದೇವೆ. ಅರಣ್ಯವನ್ನು ಬೆಳೆಸಬೇಕು. ಪ್ರಕೃತಿ ಸಂಪತ್ತು ಇದ್ದರೆ ಮಾತ್ರ ಮಳೆ ಬರುವುದು ಸಾಧ್ಯ. ಬರಗಾಲ ಪರಿಸ್ಥಿತಿಯನ್ನು ದೂರ ಮಾಡುವುದಕ್ಕೆ ಕೇಂದ್ರ ಸರಕಾರ ಎಷ್ಟು ಸಾಧ್ಯವೋ ಅಷ್ಟು ನೆರವನ್ನು ನಮ್ಮ

ರಾಜ್ಯ ಸರಕಾರಕ್ಕೆ ಸಹಾಯ ಮಾಡಬೇಕು. ರಾಜ್ಯ ಸರಕಾರವೂ ಕೂಡಾ ಬರಗಾಲ ಪರಿಹಾರಕ್ಕಾಗಿ ಬಂದ ಹಣವನ್ನು ಉತ್ತಮವಾದ ರೀತಿಯಲ್ಲಿ ಯೋಗ್ಯ ರೀತಿಯಲ್ಲಿ ಖರ್ಚು ಮಾಡಬೇಕು. ನಮ್ಮ ರಾಜ್ಯದ ಜನ ಚೆನ್ನಾಗಿ ಬದುಕಬೇಕು ಎಂದು ಹೇಳಿ ಹೆಚ್ಚು ಮಾತನಾಡದೆ, ನನಗೆ ಸಂದರ್ಭ ಒದಗಿಸಿ ಕೊಟ್ಟಿದ್ದಕ್ಕಾಗಿ ವಂದಿಸಿ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಕೆ. ಬಿ. ಶಾಣಪ್ಪನವರು ಮಾತನಾಡಬೇಕು.

ಶ್ರೀ ಕೆ. ಬಿ. ಶಾಣಪ್ಪ.—ನಾಳೆಗೆ ಮಾತನಾಡುತ್ತೇನೆ.

ಅಧ್ಯಕ್ಷರು.—ತಾವು ಮಾತನಾಡಿರಿ ಸ್ವಾಮಿ, ಇಲ್ಲ ಎಂದರೆ ಮಾನ್ಯ ಶಿವನಂಜಪ್ಪನವರು ಮಾತನಾಡಲಿ.

ಶ್ರೀ ಕೆ. ಬಿ. ಶಾಣಪ್ಪ.—ಅನೇಕ ಜನ ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡಿದ್ದಾರೆ. ನಾನೂ ಕೂಡ ಕೆಲವು ಮಾತನ್ನು ಆಡಬೇಕೆಂದು ಮಾಡಿದೆ. ಇನ್ನೂ ಸ್ವಲ್ಪ ಚೆನ್ನಾಗಿ ತಯಾರು ಮಾಡಿಕೊಂಡು ನಾಳೆ ಮಾತನಾಡೋಣ ಎಂದಿದ್ದೆ.

ಅಧ್ಯಕ್ಷರು.—ತಯಾರಿ ಗಿಯಾರಿ ಏನೂ ಇಲ್ಲ. ಎಲ್ಲಾ ತಯಾರಾಗಿಯೇ ಬಂದಿದ್ದಾರೆ. ತಾವು ಮಾತನಾಡಿ

ಶ್ರೀ ಕೆ. ಬಿ. ಶಾಣಪ್ಪ.— ನಾಳೆ ಮಾತನಾಡುತ್ತೇನೆ. ಸ್ವಲ್ಪ ತಯಾರಿ ಮಾಡಿಕೊಂಡು ಮಾತನಾಡುತ್ತೇನೆ.

ಅಧ್ಯಕ್ಷರು.— ಅವಕಾಶ ಕೊಟ್ಟರೆ ತಯಾರಿ ಮಾಡಿಕೊಳ್ಳಬೇಕು ಅಂತೀರಿ. ಅವಕಾಶ ಸಿಗದೇ ಇದ್ದಾಗ ಅವಕಾಶ ಸಿಗಲಿಲ್ಲ ಎಂದು ಹೇಳುತ್ತೀರಿ.

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್)— ಮಾನ್ಯ ಅಧ್ಯಕ್ಷರೇ, ಈ ನಾಲ್ಕು ವರ್ಷಗಳಿಂದಲೂ ನಾವು ಬರಗಾಲದ ಮೇಲೆಯೇ ಮಾತನಾಡಲಿಕ್ಕೆ ಹತ್ತಿದ್ದೇವೆ. ಬರಗಾಲದ ಬಗ್ಗೆ ಮಾತನಾಡುವುದು ಹೊಸದೇನೂ ಅಲ್ಲ, ಇದು ನಮ್ಮ ದುರ್ದೈವವೋ ಅಥವಾ ಜನತಾ ಪಾರ್ಟಿಯವರ ದುರ್ದೈವವೋ ಗೊತ್ತಿಲ್ಲ. ಬರಗಾಲವನ್ನು ನಿವಾರಣೆ ಮಾಡುವುದಕ್ಕೆ ಇವರು ಪ್ರಯತ್ನ ಮಾಡಿದ್ದಾರೆ. ಆದರೆ ಇವರ ಹತ್ತಿರ ರೊಕ್ಕ ಇಲ್ಲ. ರೊಕ್ಕ ಇಲ್ಲದೆ ಬರಗಾಲವನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಕೆಲವು ಕಡೆ ಮಳೆ ಬಂದರೆ ಕೆಲವು ಕಡೆ ಮಳೆ ಬರುವುದಿಲ್ಲ. ಜನರನ್ನು ಸುಧಾರಿಸುವುದಕ್ಕೆ ನಿಮ್ಮ ಹತ್ತಿರ ಹಣ ಬೇಕು. ನಮ್ಮ ಜಿಲ್ಲೆಯಲ್ಲಿ ೧೦ ತಾಲ್ಲೂಕುಗಳಲ್ಲಿ ಮಳೆಯಾಗಿದೆ, ಎರಡು ತಾಲ್ಲೂಕುಗಳಲ್ಲಿ ಮಾತ್ರ ಮಳೆಯಾಗದೆ ಬರಗಾಲ ಬಂದಿದೆ. ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ಜಿಲ್ಲಾ ಪರಿಷತ್ತಿನ ಮಿಟಿಂಗ್‌ಗೆ ಹೋಗಿದ್ದೆ. ಅಲ್ಲಿ ಬರಗಾಲ ಪರಿಸ್ಥಿತಿಯನ್ನು ಯಾವ ರೀತಿ ಎದುರಿಸುತ್ತೀರಿ ಎಂದು ಅಲ್ಲಿನ ಕಾರ್ಯದರ್ಶಿಗಳನ್ನು ಕೇಳಿದೆ ಅವರು ಏನು ಹೇಳಿದರು ಎಂದರೆ, ನಮ್ಮ ಹತ್ತಿರ ಹಣ ಇಲ್ಲ. ಹಣ ಇದ್ದಿದ್ದರೆ ಬರಗಾಲ ಕಾಮಗಾರಿಯನ್ನು ತೆಗೆದುಕೊಳ್ಳಬಹುದಾಗಿತ್ತು ಎಂದು ಸತ್ಯವಾದ ಮಾತನ್ನು ಹೇಳಿದರು. ಇದುವರೆಗೆ ಹಣವನ್ನು ವಿಸಲಾಗಿ ಇಡಲಾಗಿತ್ತು ಈಗ ಹಣವನ್ನು ಸರ್ಕಾರ ಬಿಡುಗಡೆ ಮಾಡಿಲ್ಲವೆಂದು ಹೇಳಿದರು. This time at least, they are giving the truth that they do not have the money. ಈಗ ಇನ್ನೂ ಒಂದು ಸರ್ಕ್ಯುಲರ್ ಬಂದಿದೆಯಂತೆ. ಅಕೌಂಟಬರ್‌ವರೆಗೆ ಯಾವುದೇ ಹಣವನ್ನು ಬಿಡುಗಡೆ ಮಾಡಬಾರದೆಂದು ಈ ಸರ್ಕ್ಯುಲರ್‌ನಲ್ಲಿ ತಿಳಿಸಲಾಗಿದೆಯಂತೆ. ರಾಜ್ಯದಲ್ಲಿ ಳಿ ಕೋಟಿ ಜನರು ಬರಗಾಲಕ್ಕೆ ತುತ್ತಾಗಿದ್ದಾರೆ ಇವರುಗಳೆಲ್ಲರನ್ನೂ ನೀವು ಸುಧಾರಿಸಬೇಕು. ಮಲೆನಾಡು ಪ್ರದೇಶಗಳಲ್ಲಿ ಮೊದಲು ಬಹಳ ಮಳೆಯಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಮಲೆನಾಡು ಪ್ರದೇಶಗಳಲ್ಲೂ ಮಳೆ ಬೀಳದೆ ಅಲ್ಲಿಯೂ ಬರಗಾಲ ಪರಿಸ್ಥಿತಿ ಉಂಟಾಗಿದೆ. ಕುಡಿಯುವ ನೀರಿಗಾಗಿ ಸರ್ಕಾರದವರು ಬೋರ್‌ವೆಲ್‌ಗಳನ್ನು ಹಾಕಿಸಿದೆ. ಈಗ ಮಾನ್ಯರು ಫೀಟ್‌ಗಳಷ್ಟು ಆಳವಾಗಿ ಬೋರ್‌ವೆಲ್‌ಗಳನ್ನು ಹಾಕಿಸಿದರೂ ಕೂಡ ನೀರು ಸಿಗದಂಥ ಪರಿಸ್ಥಿತಿ ಉಂಟಾಗಿದೆ ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದರೆ ಜನರ ಸಮಸ್ಯೆ ಬಗೆಹರಿಯುವುದಿಲ್ಲ ನೀವು ಹಾಕಿಸಿದಂಥ ಬೋರ್‌ವೆಲ್‌ಗಳು ಸರಿಯಾಗಿವೆಯೇ ಕೆಟ್ಟಿವೆಯೇ ಎಂಬ ದನ್ನು ಯಾರೂ ನೋಡುತ್ತಿಲ್ಲ. ನಮ್ಮ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಇರಿಗೇಷನ್ ವ್ಯವಸ್ಥೆ ಸರಿಯಾಗಿಲ್ಲ. ತುಂಗಭದ್ರಾ

ಏರಿಯಾದಲ್ಲಿ ಮಾತ್ರ ಸ್ವಲ್ಪ ಭಾಗ ಇರಿಗೇಷನ್ ವ್ಯವಸ್ಥೆ ಇದೆ. ಯು.ಕೆ.ಪಿ. ಪ್ರಾಜೆಕ್ಟ್ ಕಲಂಟಂತ್ತಾ ನಡೆದಿದೆ. 'ಮಂಜಾನೆ' ಕನ್ನಡ ಪತ್ರಿಕೆಯಲ್ಲಿ ಮಾನ್ಯ ದೇವೇಗೌಡರು ನಮ್ಮ ಭಾಗದಲ್ಲಿ ೨೬ ಲಿಫ್ಟ್ ಇರಿಗೇಷನ್‌ನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಬರಗಾಲ ಪರಿಸ್ಥಿತಿಯನ್ನು ಎದುರಿಸ ಬೇಕಾದರೆ ನದಿಗಳಿಂದ ಹೆಚ್ಚು ನೀರನ್ನು ಲಿಫ್ಟ್ ಮಾಡಿ ಹಸಿರನ್ನು ಬೆಳೆಯಬೇಕು. ಬರೀ ಲಿಫ್ಟ್ ಇರಿಗೇಷನ್‌ಗಳನ್ನು ಮಾತ್ರ ಮಾಡದೇ ಎಲ್ಲೆಲ್ಲಿ ಕೆರೆಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆಯೋ ಅಂತಹ ಕಡೆಗಳಲ್ಲೂ ಕೆರೆಗಳನ್ನು ಕಟ್ಟಿಸಿ ಇರಿಗೇಷನ್ ವ್ಯವಸ್ಥೆ ಮಾಡಬೇಕು. ಒಂದು ಸಾರಿ ಮಾನ್ಯ ಬೊಮ್ಮಾಯಿಯವರು ಮಾನ್ಯ ಧರ್ಮಸಿಂಗ್‌ರವರ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಗೋಶಾಲೆಯನ್ನು ಇನ್ಯಾಗುರೇಟ್ ಮಾಡಿದರು. ಇವರು ಇನ್ಯಾಗುರೇಟ್ ಮಾಡಿದ ೫ ದಿನಗಳ ನಂತರ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ನೋಡಿದರೆ ಇವರು ಇನಾಗುರೇಟ್ ಮಾಡಿದ ಜಾಗದಲ್ಲಿ ಗೋಶಾಲೆಯೂ ಇಲ್ಲ. ಗೋವುಗಳೂ ಇಲ್ಲ ಕಮಲಾಪುರದಲ್ಲಿಯೂ ಇದೇ ರೀತಿ ಆಗಿತ್ತು. ಕೆಲವು ಕಡೆ ಗೋವುಗಳಿಗೆ ತಂದು ಹಾಕಿದ್ದ ಜೋಳದ ಕಡ್ಡಿಗಳನ್ನು ಗೋವುಗಳು ತಿನ್ನುವುದಕ್ಕೆ ಆಗದ ಪರಿಸ್ಥಿತಿಯಲ್ಲಿ ಇದ್ದವು. ಗೋಶಾಲೆಗೆ ವಿತರಣೆ ಮಾಡುವುದಕ್ಕೆ ತರಿಸಿದ್ದ ಮೇವನ್ನು ಸರಿಯಾಗಿ ವಿತರಣೆ ಮಾಡುವ ಸೌಜನ್ಯ ಕೂಡ ಅಧಿಕಾರಿಗಳಲ್ಲಿ ಇರಲಿಲ್ಲ ಚಿತ್ತಾಪುರ ಮತ್ತು ಚಿಂಚೋಳಿ ಕಡೆ ಮಳೆ ಚೆನ್ನಾಗಿ ಬರಬಹುದೆಂದು ಎಲ್ಲರೂ ತೊಗರಿ ಕಾಳನ್ನು ಬಿತ್ತನೆ ಮಾಡಿದರು. ಆದರೆ ಮಳೆ ಸಕಾಲದಲ್ಲಿ ಬರದೆ ತೊಗರಿ ಬೆಳೆಗೆ ಬಹಳ ಹಾನಿಯಾಗಿದೆ. ತೊಗರಿ ಬೇಳೆಗೆ ಒಂದು ಕ್ವಿಂಟಾಲ್‌ಗೆ ೭ ನೂರು ರೂಪಾಯಿಗಳು ಸಿಗಬಹುದೆಂದು ತಿಳಿದುಕೊಂಡು ಬಿತ್ತನೆ ಮಾಡುತ್ತಾರೆ. ಬೆಳೆ ಎಲ್ಲಾ ಬಂದ ಮೇಲೆ ಮಾರ್ಕೆಟ್‌ನಲ್ಲಿ ಇದ್ದಕ್ಕಿದ್ದ ಹಾಗೆ ಬೆಲೆ ಕಡಿಮೆಯಾಗಿ ರೈತ ತೊಗರಿಯನ್ನು ಬೆಳೆಯುವುದಕ್ಕೆ ಎಷ್ಟು ಖರ್ಚು ಮಾಡಿರುತ್ತಾನೋ ಅಷ್ಟು ಕೂಡ ಸಿಗುವುದಿಲ್ಲ. ಬರೀ ತೊಗರಿ ಮಾತ್ರ ಈ ರೀತಿಯಾಗಿಲ್ಲ. ಹೆಸರು, ಅಲಸಂದಿ ಹಾಗೂ ಇತರ ದ್ವಿದಳ ಧಾನ್ಯಗಳ ಫಸಲೂ ಕೂಡ ಹೋದ ಹಾಗೆಯೇ ಆಗಿದೆ. ಬೇರೆ ಕಡೆಗಳಲ್ಲಿ ಈ ವ್ಯವಸ್ಥೆಯನ್ನು ತಾವುಗಳು ಹಣ ಕೊಡದೇ ಮಾಡಿದರೆ, ಬರಗಾಲವನ್ನು ಎದುರಿಸುವುದಕ್ಕೆ ಆಗುವುದಿಲ್ಲ ಎಂದು ನನಗೆ ಅನ್ನಿಸುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದರು, ನಾನು ೧೧ ಕೋಟಿ ರೂಪಾಯಿಗಳನ್ನು ಒಂದು ಸಲ ಬಿಡುಗಡೆ ಮಾಡಿದ್ದೇನೆ. ೭ ಕೋಟಿ ರೂಪಾಯಿಗಳನ್ನು ಒಂದು ಸಲ ಬಿಡುಗಡೆ ಮಾಡಿದ್ದೇನೆ ಎಂದು ದಯವಿಟ್ಟು ತಾವುಗಳು ಹಣವನ್ನು ಬಿಡುಗಡೆ ಮಾಡಿದ್ದು ಯಾವ ಯಾವ ತಾಲ್ಲೂಕಿಗೆ ಎಂತ್ತು ಆದು ಎಷ್ಟೆಷ್ಟು ಎಂಬುದನ್ನು ವಿವರವಾಗಿ ಕೊಡಬೇಕು. ಈ ೧೨ ಕೋಟಿ ರೂಪಾಯಿಗಳಿಂದ ನಮ್ಮ ಈ ನಾಲ್ಕು ವರ್ಷಗಳ ಕಾಲದ ಬರಗಾಲವನ್ನು ಎದುರಿಸುವುದಕ್ಕೆ ಆಗುವುದಿಲ್ಲ. ೧೯೭೦-೧೯೭೨-೧೯೭೩ರಲ್ಲಿ ಮಾನ್ಯ ದೇವರಾಜ್ ಅರಸ್‌ರವರು ಇಂತಹ ಬರಗಾಲ ಪರಿಸ್ಥಿತಿಯನ್ನು ಎದುರಿಸಿದ್ದಾರೆ. ಆಗ ನಾವು ಅನೇಕ ಜನರು ಹೋರಾಟ ಮಾಡಿದಾಗ ಟೆಲೆಕ್ಸ್ ಮೆಸೇಜ್‌ನಿಂದ ಕೋಟಿಗಟ್ಟಲೆ ಹಣವನ್ನು ಅವರು ಜನರಿಗಾಗಿ ರಿಲೀಸ್ ಮಾಡಿದರು. ಈಗ ನಮ್ಮ ಕಾರ್ಮಿಕ ಸಚಿವರಾದ ಕಾಂತಾರವರು, ಕೂಲಿಯನ್ನು ೮ ರೂಪಾಯಿಗಳಿಂದ ೧೨ ರೂಪಾಯಿಗಳಿಗೆ ಏರಿಸುತ್ತೇವೆ ಎಂದು ಹೇಳಿದ್ದಾರೆ.

ಎನ್‌ಆರ್‌ಇಪಿ ಬಗ್ಗೆ ಆದಕ್ಕೆ ಬಿಡುಗಡೆ ಮಾಡಿದ ಹಣದ ಬಗ್ಗೆ ಈಗಾಗಲೇ ನಾವು ಮಾತನಾಡಿದ್ದೇವೆ. NREP is not a project. It has got its own way ಅದನ್ನು ತಾವು ಹೇಳುವುದಿಲ್ಲ. ಮಾನ್ಯ ಕೆ. ಎಚ್. ಪಾಟೀಲ್‌ರವರು ಹೇಳಿದರು, ತಾವುಗಳು ಕೇಂದ್ರ ಸರಕಾರದ ಹಣವನ್ನು ಎಷ್ಟು ಖರ್ಚು ಮಾಡಿದ್ದೀರಿ? ಎಂದು ಎನ್‌ಆರ್‌ಇಪಿ, ಇದು ಬರಗಾಲ ಇರಲಿ, ಇಲ್ಲದೇ ಇರಲಿ, ಅದು ಯಾವಾಗಲೂ ಇರತಕ್ಕಂಥ ಒಂದು ಯೋಜನೆ. ಎನ್‌ಆರ್‌ಇಪಿಯನ್ನು ಒಯ್ದು ಅಡಿತನಲ್ ಆಕ್ಷನ್ ಪ್ಲಾನ್‌ನ್ನು ಆಕ್ಷನ್ ಪ್ಲಾನ್‌ನಲ್ಲಿ ಇವರು ಆಳವಡಿಸಿದ್ದಾರೆ. ಅದುದರಿಂದ ದಯವಾಡಿ ಎನ್‌ಆರ್‌ಇಪಿಯನ್ನು ತೆಗೆದುಕೊಂಡು ತಾವು ಬರಗಾಲ ಕಾಮಗಾರಿ ಎಂದು ಹೇಳಿದರೆ, ಅದನ್ನು ನಾನು ಒಪ್ಪುವುದಿಲ್ಲ, ಈ ಸದನವೂ ಒಪ್ಪುವುದಿಲ್ಲ. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ದಯವಾಡಿ ತಾವುಗಳು ಉತ್ತರವನ್ನು ಕೊಡುವಾಗ ಕೇಂದ್ರ ಸರಕಾರದವರು ಎನ್‌ಆರ್‌ಇಪಿಗೆ ೧೯೮೬ರಲ್ಲಿ ಎಷ್ಟು ಹಣವನ್ನು ಕೊಟ್ಟರು ? ಅದರಲ್ಲಿ ರಾಜ್ಯ ಸರಕಾರದ ಕಾಂಟ್ರಿಬ್ಯೂಷನ್ ಎಷ್ಟು ಎಂಬುದನ್ನು ತಿಳಿಸಬೇಕು.

ಈ ಬೋರ್‌ವೆಲ್ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ಹೇವಿಡ್ಯೂಟಿ ಪಂಪ್ಸ್‌ನ್ನು ಏನು ಪರ್‌ಚೇಸ್ ಮಾಡಂತ್ತಿದ್ದಾರೆ. ಅಂದರೆ ೩೦೦ ಇಂತಹ ಪಂಪ್ಸ್‌ನ್ನು ಖರೀದಿ ಮಾಡಬೇಕೆಂದು

ಹೇಳಿದ್ದಾರೆ. ಇಂತಹ ಪಂಪ್ಸ್‌ಗಳಲ್ಲಿ ನೀರು ಸರಿಯಾಗಿ ಬರುವುದಿಲ್ಲ. ಇಂತಹ ಪಂಪ್‌ಗಳಿಂದ ಬಹಳ ಕೆಳಗಡೆ ನೀರು ಇರುವುದನ್ನು ಎತ್ತುತ್ತಾರೆ. ಈ ವಿಚಾರವನ್ನು ನಾನು ಬಹಳ ಕಡೆಗಳಲ್ಲಿ ನೋಡಿದ್ದೇನೆ. ಈ ಪಂಪ್‌ನ್ನು ಆಪರೇಟ್ ಮಾಡುವಾಗ ೨–೩ ಜನರು ಹಾರ್ಟ್ ಫೈಲ್ ಆಗಿ ಸತ್ತಿದ್ದಾರೆ. ಪಯಸ್ವಾದವರಿಗಂತೂ ಇದನ್ನು ಆಪರೇಟ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಎರಡು ಮೂರು ಸಲ ಇದನ್ನು ಪಂಪ್ ಮಾಡಿದರೆ ಸತ್ತೇ ಹೋಗುತ್ತಾರೆ. ಅಂತಹ ಪರಿಸ್ಥಿತಿಯು ಇದೆ.

ಇನ್ನು ಮಿನಿವಾಟರ್ ಸ್ಕೀಮ್ಸ್ ಒಳ್ಳೆಯ ರೀತಿಯಲ್ಲಿ ಮಾಡಿದ್ದೀರಿ. ಆದರೆ ದುರ್ದೈವದ ಸಂಗತಿ ಅಂದರೆ, ಮಿನಿವಾಟರ್ ಸಪ್ಲೈ ಸ್ಕೀಮ್ಸ್ ಬಗ್ಗೆ ನಾನು ಸದನದಲ್ಲಿ ಹೋದ ಸಲ ಮಾತನಾಡಿದಾಗ ಕೌಲಗಿ. ಮಿಣಜಗಿ, ಈ ಹಳ್ಳಿಗಳಿಗೆ ೬೦ ಸಾವಿರ ರೂಪಾಯಿಗಳ ಒಂದು ಎಸ್ಟಿಮೇಟ್ ಮಾಡಿ ಕಳುಹಿಸಿದ್ದೇವೆ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಕೇಳಿ ಎಂದು ಹೇಳಿದರು. ಅವರನ್ನು ಕೇಳಿದಾಗ, ಈ ೫೦–೬೦ ಸಾವಿರ ರೂಪಾಯಿಗಳ ಎಕ್ಸ್‌ಟ್ರಾ ಬರ್ಡನ್ ನಮಗೆ ಆಗುತ್ತದೆ ಇದನ್ನು ನಾವು ಯಾವ ಪ್ಲಾನ್‌ನಲ್ಲಿ ತೆಗೆದುಕೊಳ್ಳಬೇಕೆಂದು ನಮಗೆ ಗೊತ್ತಾಗುತ್ತಿಲ್ಲ ಎಂದು ತಮ್ಮ ಕಷ್ಟವನ್ನು ಹೇಳಿಕೊಂಡರು. ೧೯೮೨ರ ಪ್ಲಾನ್‌ನಲ್ಲಿ ಸರಕಾರದವರು ಮಾಡಿ ಕಳುಹಿಸಿದ್ದಾರೆ, ನಮ್ಮ ಹತ್ತಿರ ಪ್ಲಾನ್ ಇಲ್ಲ ಅದಕ್ಕಾಗಿ ಯಾವ ಕೆಲಸವನ್ನು ಸದ್ಯಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ತಾವುಗಳು ಜಿಲ್ಲಾವಾರು ಹಣವನ್ನು ಬಿಡುಗಡೆ ಮಾಡುತ್ತೀರಿ ಎಂದು ಹೇಳಿದ್ದೀರಿ. ಮಂಡಲ ಪಂಚಾಯತ್‌ಗಳಿಗೂ ಕೂಡ ಆದೇ ಪ್ರಕಾರ ಇದೆ. ಮೊಟ್ಟಮೊದಲನೆಯದಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಬಂದಾಗ ಈ ಅಧಿಕಾರ ವಿಕೇಂದ್ರಿಕರಣ ಬಹಳ ಕೆಳಗಡೆ ಹೋಗ ಬೇಕೆಂಬುದು ತಮ್ಮ ಉದ್ದೇಶವಾಗಿತ್ತು. ರಾಜಕೀಯ ಇದನ್ನು ಹೇಗೆ ರೂಢಿಸಿಕೊಳ್ಳಬೇಕೆಂದು ತಾವು ಇದನ್ನು ಮಾಡಿದ್ದೀರಿ, ಅದು ಒಳ್ಳೆಯ ಕೆಲಸ. ಆ ಬಗ್ಗೆ ತಾವುಗಳು ಬಹಳಷ್ಟು ಹೇಳಿಕೊಂಡಿದ್ದೀರಿ. ಒಂದು ತಲೆಗೆ ಹತ್ತು ರೂಪಾಯಿಗಳನ್ನು ಕೊಡಬೇಕೆಂದು ಕಾನೂನು ಮಾಡಿದ್ದೀರಿ. ಒಂದು ಮಂಡಲ ಪಂಚಾಯತಿಗೆ ೧೦ ಲಕ್ಷ ರೂಪಾಯಿಗಳು ಬರಬೇಕಾಗುತ್ತದೆ. ನಿಮ್ಮ ಲೆಕ್ಕದ ಪ್ರಕಾರ ೬೦ ಪೈಸೆ ಕೂಡ ಬರುವುದಿಲ್ಲ ಈಗ ೭ ತಿಂಗಳುಗಳ ಅವಧಿಯಲ್ಲಿ ಈ ಪರಿಸ್ಥಿತಿ ಇರುವಾಗ ನೀವು ಕೊಡುವ ಹಣವನ್ನು ಅಧಿಕಾರಿಗಳಿಗೆ ಮತ್ತು ಇತರ ಖರ್ಚಿಗೆ ಮೇಂಟೈನ್ ಮಾಡುವುದಕ್ಕೆ ಕೂಡ ಆಗುತ್ತಾ ಇಲ್ಲ. ಯಾವುದೇ ಕಾಮಗಾರಿಗಳನ್ನು [ತೆಗೆದುಕೊಳ್ಳುವುದಕ್ಕೆ ಜಿಲ್ಲಾಪರಿಷತ್‌ನವರಿಗೆ ಶಕ್ತಿ ಇಲ್ಲ. ಹೋದ ತಿಂಗಳಲ್ಲಿ ೨೬ ಲಕ್ಷ ರೂಪಾಯಿಗಳನ್ನು ಕಳುಹಿಸಿದ್ದೀರಿ. ಅಲ್ಲಿ ಅನೇಕ ಕಂಟ್ರಾಕ್ಟರ್ಸ್‌ಗೆ ಬಿಲ್ ಪೇಮೆಂಟ್ ಆಗಿರಲಿಲ್ಲ. ಜಿಲ್ಲಾ ಪರಿಷತ್ತು ಬರುವುದಕ್ಕೆ ಮುಂಚಿತವಾಗಿ ಮಾಡಿದಂತಹ ಖರ್ಚು ಅದು ನಮಗೆ ಬರುವುದಿಲ್ಲ ಎಂದು ಅಲ್ಲಿಯ ಅಧ್ಯಕ್ಷರು ಬರೆದರೆ ಪಿಡಬ್ಲ್ಯೂಡಿ ಇಲಾಖೆಯವರು ಇದು ಯಾರೇ ಮಾಡಲಿ, ಮೊದಲು ೨೬ ಲಕ್ಷ ರೂಪಾಯಿಗಳ ಪೇಮೆಂಟ್ ಮಾಡಬೇಕೆಂದು ಪರವಾನಿಗೆ ತೆಗೆದು ಕೊಂಡರೆ, ಮುಂದೆ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಕಾಣುತ್ತದೆ. ಹಾಗಾದರೆ ಮುಂದಿನ ಕೆಲಸಗಳನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳುತ್ತೀರಿ? ಅಡಿಶನಲ್ ಪ್ಲಾನ್ ಸ್ಕೀಮ್ ಮತ್ತು ಪ್ಲಾನ್ ಸ್ಕೀಮ್‌ನಲ್ಲಿ ಸುಮಾರು ೧೫೦ ಕೆಲಸಗಳು ಹಾಗೆಯೇ ಇವೆ.

ಇದರಲ್ಲಿ ಸುಮಾರು ೧೦–೧೫ ಲಕ್ಷ ಮಾತ್ರ ಖರ್ಚು ಮಾಡಿದ್ದಾರೆ. ಸುಮಾರು ೪೦–೫೦ ಲಕ್ಷ ಖರ್ಚು ಮಾಡಿದರೆ ಬಾವಿಯನ್ನೋ, ಕೆರೆಯನ್ನೋ, ರೋಡ್‌ಗಳನ್ನೋ ಬಲ್ಯಾಗಿ ಕಂಪ್ಲೀಟ್ ಮಾಡುವುದಕ್ಕೆ ಚಾನ್ಸ್ ಇದೆ. ಇದನ್ನು ಮಾಡುವುದಕ್ಕೆ ನೀವು ಯಾವ ಹೆಡ್‌ನಲ್ಲಿ ಹಣವನ್ನು ಬಿಡುಗಡೆ ಮಾಡುತ್ತೀರಿ ಎಂಬುದನ್ನು ದಯವಿಟ್ಟು ನಮಗೆ ತಿಳಿಸಬೇಕು. ಆಗ ನಾವೂ ಆದನ್ನು ಫಾಲೋ ಅಪ್ ಮಾಡಬಹುದು. ಮಾನ್ಯ ಕಂದಾಯ ಸಚಿವರು ಜಿಲ್ಲಾ ಪರಿಷತ್ತಿನ ಮೀಟಿಂಗಿಗೆ ಬರುವುದನ್ನು ಮತ್ತು ನಮ್ಮ ಜಿಲ್ಲೆಗೆ ಭೇಟಿ ನೀಡುವುದನ್ನು ಈಗಾಗಲೇ ಬಂದ್ ಮಾಡಿದ್ದಾರೆ. ಹೋದ ಸಲ ನೀವು ಬಂದಾಗ ೫೦ ಲಕ್ಷ ತಂದಿದ್ದಿರಿ. ಈ ಸಲ ಬರುವಾಗ ೧೦–೧೫ ಕೋಟಿ ಇಲ್ಲದಿದ್ದರೆ ಬರಲೇ ಬೇಡಿ. ಹಾಗೆಯೇ ಯಾವ ಯಾವ ಕೆಲಸವನ್ನು ಈ ಸಲ ಕೈಗೆತ್ತಿಕೊಳ್ಳಲಾಗುವುದು ಎಂಬ ಪಟ್ಟಿಯನ್ನು ತರಬೇಕು. ಈಗಲೇ ಅಡಿಷನಲ್ ಆಕ್ಷನ್ ಪ್ಲಾನಿನ ಒಂದು ಕಾಪಿಯನ್ನು ಮಾಡಿಕೊಂಡು ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಎಂಥೆಂಥ ಕೆಲಸಗಳು ಬಾಕಿ ಇವೆ ಎಂಬುದನ್ನು ಪಟ್ಟಿ ಮಾಡಿ ಕೊಂಡುಬಿಡಿ. ಹೋದ ಸಲ ಯಾವ್ಯಾವ ಕಡೆ ಟ್ಯಾಂಕರ್‌ಗಳಲ್ಲಿ ನೀರು ಕಳಿಸಿದ್ದಿರಿ, ಅದನ್ನು ಲಿಸ್ಟ್ ಮಾಡಿಕೊಂಡು ಬಿಡಿ. ಅಲ್ಲಿಗೆ ಬಂದ ಮೇಲೆ ಶಾಸಕರ ಸಭೆ ಕರೆಯಬೇಕು. ನಾವೂ ಸಲಹೆ ಕೊಡುತ್ತೇವೆ

ತ್ತೇವೆ. ಸಹಕಾರ ಕೊಡುತ್ತೇವೆ. ಈ ಬರಗಾಲಕ್ಕಾಗಿ ಕೇಂದ್ರದಿಂದ ಏನು ನೀವು ೨೦೭ ಕೋಟಿ ಕೇಳಿದ್ದೀರಿ ಆಗಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ನಮ್ಮ ಎರಡೂ ಕಡೆಯ ಒತ್ತಡದಿಂದ ಕೇಂದ್ರವು ಬರ ಪರಿಹಾರಕ್ಕೆ ಹಣ ಬಿಡುಗಡೆ ಮಾಡಲಿ ಎಂದು ಒತ್ತಾಯಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).— ಅಧ್ಯಕ್ಷರೇ ಸಂಮಾರು ೪ ವರ್ಷದಿಂದ ಸತತವಾಗಿ ಕರ್ನಾಟಕದಲ್ಲಿ ಬರವನ್ನು ನಾವು ಎದುರಿಸುತ್ತಿದ್ದೇವೆ. ಇದಕ್ಕಾಗಿ ಸರ್ಕಾರ ಅನೇಕ ಕಾರ್ಯಗಾರಿಗಳನ್ನು ಹಾಕಿಕೊಂಡಿದೆ. ಮಂಖ್ಯವಾಗಿ ಬರಗಾಲ ಬಂದರೆ ಅಧಿಕಾರಿಗಳು, ಕಂಟ್ರಾಕ್ಟರುಗಳಿಗೆ ಸಮೃದ್ಧಿಯಾಗುತ್ತದೆ. ಮಳೆ ಚೆನ್ನಾಗಿ ಬಂದರೆ ಮರ್ಚೆಂಟ್ಸ್, ವಿಜೆಂಟ್ಸ್‌ಗಳಿಗೆ ಸಮೃದ್ಧಿ ಬರುತ್ತದೆ ಇಷ್ಟು ಬಿಟ್ಟರೆ ಕೇವಲ ಅಗ್ಗದ ಪ್ರಚಾರ ಮಾಡಿ ಅಧಿಕಾರಿಗಳ ಅಂಕಿ ಅಂಶಗಳ ದೊಂಬರಾಟ ಇದೆಯಲ್ಲ ಇದನ್ನು ದಯವಿಟ್ಟು ನಿಲ್ಲಿಸಿ ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇಲ್ಲಿ ಜಿಲ್ಲಾಪರಿಷತ್ತುಗಳಿಗೆ ಏಳು ಎಂಟು ಕೋಟಿ ಕೊಟ್ಟಿದ್ದೇವೆ ಎನ್ನುತ್ತಾರೆ ಇವರು. ಆದರೆ ಅದು ಎಲ್ಲಿಗೆ ಯಾರಿಗೆ ಹೋಗಿದೆ? ಯಾರಿಗೂ ಗೊತ್ತಿಲ್ಲ ಇವತ್ತಿನ ದಿವಸ ಒಬ್ಬ ಟ್ರಾಕ್ಟರ್ಸ್ ಕೊಡುವವನ ಹಣ ಸದುಪಯೋಗವಾಗಬೇಕಾದರೆ ಏನಾದರೂ ಕೆಲಸ ಆಗಬೇಕು. ಮಾನ್ಯ ಬೊಮ್ಮಾಯಿಯವರೇ ಹಿಂದೆ ನೀವು ಈ ಕಡೆ ಕಂಳಿತುಕೊಂಡು ಎಷ್ಟು ಕಠೋರವಾದ ಭಾಷಣ ಮಾಡಿದ್ದೀರಿ ಎಂಬುದನ್ನು ಕಂಡಿದ್ದೇನೆ ಆದರೆ ಅದನ್ನು ಏಕೆ ಈಗ ನೀವು ಆನುಷ್ಠಾನಕ್ಕೆ ತರುತ್ತಿಲ್ಲ ಎಂದು ನಾನು ಕೇಳುವುದು ತಪ್ಪಾಗುವುದಿಲ್ಲ. ನಮ್ಮ ಮಧುಗಿರಿ ತಾಲ್ಲೂಕಿನಲ್ಲಿ ಮೋರೇನಹಳ್ಳಿ ಎಂಬ ಊರಿನಲ್ಲಿ ೩೭೧ ಮಂಕ್ಕಳು ಸತ್ತಿವೆ ತುಮಕೂರು ತಾಲ್ಲೂಕಿನಲ್ಲಿ ಬೆಳಗೆರೆ ಗ್ರಾಮದಲ್ಲಿ ೧೫೦ ಹಸುಗಳು ಪ್ರಾಣ ಬಿಟ್ಟಿವೆ. ತಮಗೆ ಏನಾದರೂ ಇದರ ಬಗ್ಗೆ ವದಂತಿ ಬಂದಿದೆಯೇ ? ಹಸುಗಳು ಮಂತಲ್ಲ ಮಂಕ್ಕಳು ಏಕೆ ಸತ್ತವು ಎಂಬ ಬಗ್ಗೆ ವದಂತಿ ಬಂದಿದೆಯೇ? ಎಂದು ಕೇಳುತ್ತಿದ್ದೇನೆ. ಜಿಲ್ಲಾ ಪರಿಷತ್ ಹೇಳಿಕೆಗಳು ಎರಡು ಮೂರು ಬಂತು ಒಂದಕ್ಕೊಂದು ವಿರೋಧಾಭಾಸವಾಗಿದೆ. ಬರಗಾಲ ಬಂದು ಎರಡು ರೂಪಾಯಿ ಕೂಲಿ ಕೊಡತಕ್ಕಂತಹ ಮನುಷ್ಯರು ಇವತ್ತು ಆ ಊರಿನಲ್ಲಿ ಇಲ್ಲ ಆಂಧ್ರಪ್ರದೇಶದ ಆ ಕಡೆ ಈ ಕಡೆ ಅಲ್ಲಿ ಇಲ್ಲಿ ಹೋಗಿದ್ದಾರೆ. ಮಕ್ಕಳಿಗೆ ಆಹಾರ ಕೊಡಲಾಗದೇ ಇರತಕ್ಕಂತಹ ಕಾರಣ ಕೂಡ ಇದೆ. ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರನ್ನು ಕೇಳಿದರೆ ನಿಜವಾಗಲೂ ನನಗೆ ಏನೂ ಅಧಿಕಾರವಿಲ್ಲ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಹೋದ ವರ್ಷ ಎಷ್ಟು ಹಣ ಇದೆ ಈ ವರ್ಷ ಬಡ್ಜೆಟ್‌ನಲ್ಲಿ ಎಷ್ಟು ಇತ್ತು ಎಂಬುದನ್ನು ನೋಡಬೇಕಾಗುತ್ತದೆ. ೩೫ ಜನ ಮಂತ್ರಿಗಳನ್ನು ತೆಗೆದುಕೊಳ್ಳುವ ಮೂಲಕ ಹಣ ವೆಚ್ಚವಾಗುತ್ತಿದೆ. ಸರ್ಕಾರದವರು ಹಣವನ್ನು ರೂಢಿಸಿಕೊಳ್ಳಬೇಕು ಯಾವ ರೀತಿ ರೂಢಿಸಿಕೊಳ್ಳಬೇಕು ಎಂಬುದನ್ನು ಯೋಚನೆ ಮಾಡುವುದನ್ನು ಬಿಟ್ಟು ದುಂದು ವೆಚ್ಚ ಮಾಡಿ ೩೫ ಜನ ಮಂತ್ರಿಗಳನ್ನು ನೇಮಕ ಮಾಡುವ ಅವಶ್ಯಕತೆ ಇದೆಯೇ ಎಂದು ನೇರವಾಗಿ ಕೇಳಬೇಕಾಗುತ್ತದೆ. ಇನ್ನು ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಟಿ ಬಗ್ಗೆ ಮಾನ್ಯ ದೇವೇಗೌಡರು ಬಲವಾಗಿ ಪ್ರತಿಪಾದನೆ ಮಾಡಿದರು. ಈ ಕಮಿಟಿ ವರದಿಯನ್ನು ಸರಕಾರ ಒಪ್ಪಿಕೊಂಡು ಗುಂಡೂರಾಯರು ೨೦ ಜನ ಮಂತ್ರಿಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಂತ್ತಿದ್ದರು. ಯಾವುದೇ ಅಧಿಕಾರಿಯಾದರೂ ಕೂಡ ಜನತಾ ಪಕ್ಷದ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಸಾಧನೆ ಏನೆಂದರೆ ಈ ವರ್ಷ ಇಷ್ಟು ಟ್ರಾನ್ಸ್‌ಫರ್ ಮಾಡಿದ್ದು, ಇಷ್ಟು ಕ್ಯಾನ್ಸಲ್ ಮಾಡಿದ್ದು ಇತ್ಯಾದಿ ಹೇಳಲು ಒಂದು ಪೋರ್ಟ್ ಫೋಲಿಯೋವನ್ನು ಮಾಡಬೇಕಾಗುತ್ತದೆ. ಮಾನ್ಯ ಮಂಖ್ಯ ಮಂತ್ರಿಯವರು ಭ್ರಷ್ಟಾಚಾರ ತೊಲಗಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ ಒಂದು ಪೋರ್ಟ್ ಫೋಲಿಯೋವನ್ನು ಬಿಟ್ಟಿದ್ದೀರಿ. ನೀವು ಮಿನಿಸ್ಟರ್ ಫಾರ್ ಟ್ರಾನ್ಸ್‌ಫರ್ಸ್ ಆಂಡ್ ಕ್ಯಾನ್ಸಲೇಷನ್ ಎಂದು ಏಕೆ ಮಾಡಬಾರದು ? ಇದರಿಂದ ನಿಮ್ಮ ಪಕ್ಷವನ್ನ ಚೆನ್ನಾಗಿ ಕಟ್ಟಬಹುದು. ಎಲ್ಲಾ ಅಧಿಕಾರಿಗಳು ನಿಮ್ಮ ಹತ್ತಿರ ಬರುತ್ತಾರೆ, ಇದರಿಂದಾಗಿ ಪಕ್ಷವನ್ನು ಮಾತ್ರ ಚೆನ್ನಾಗಿ ಬೆಳೆಸಬಹುದು. ಇಷ್ಟೇ ಆಗುತ್ತಿದೆಯೇ ವಿನಹ ಏನೂ ಆಗುತ್ತಿಲ್ಲವೆಂಬ ಮಾತನ್ನು ಹೇಳಬೇಕಾಗುತ್ತದೆ, ನನ್ನ ಕ್ಷೇತ್ರದಲ್ಲಿ ಬಿ. ಡಿ. ಒ. ರವರು ನಿಯಮಕ್ಕೆ ವಿರೋಧವಾಗಿ ೩೫ ಮಂನೆಗಳನ್ನು ಕಟ್ಟಿಸಿದ್ದಾರೆ ಅವರನ್ನು ನಜೀರ್ ಸಾಬ್‌ರವರು ಟ್ರಾನ್ಸ್‌ಫರ್ ಮಾಡಿದರು. ಇವರ ಟ್ರಾನ್ಸ್‌ಫರ್ ಕ್ಯಾನ್ಸಲ್ ಆಗಬೇಕೆಂದು ಜಿಲ್ಲಾ ಮಂತ್ರಿಗಳು ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ಹೇಳಿದ್ದಾರೆ. ಮಾನ್ಯ ರಾಮಯ್ಯನವರು ಹೇಳಿದ್ದಾರೋ ಏನೋ ಗೊತ್ತಾಗಲಿಲ್ಲ.

ಶ್ರೀ ವೈ. ಕೆ. ರಾಮಯ್ಯ.— ಯಾರು ಎಂದು ಸ್ಪಷ್ಟವಾಗಿ ಹೇಳಿದರೆ ನಾನು ಉತ್ತರ ಕೊಡುತ್ತೇನೆ. ನೇರವಾಗಿ ಹೇಳಿ ಉತ್ತರ ಕೊಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ, ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಕಾಗದ ಕೊಟ್ಟಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ.— ಬಿ. ಡಿ. ಜ. ರವರು ನನ್ನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಗಂಬ್ಳಿಗೆ ವರ್ಗವಾಗಿ ಹೋಗಿದ್ದಾರೆ ಅವರು ಟ್ರಾನ್ಸ್‌ಫರ್ ಆಗಿರುವುದು ನಿಜ. ನನ್ನ ಹೆಸರು ಹೇಳುವುದರಲ್ಲಿ ಅರ್ಥವಿಲ್ಲ, ರಾಮಯ್ಯನವರ ಪಾತ್ರವಿಲ್ಲವೆಂದು ಹೇಳಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ.—ಧನ್ಯವಾದಗಳು. ನನಗೆ ಗೊತ್ತಿರುವ ಹಾಗೆ ಲಕ್ಷ್ಮೀನರಸಿಂಹಯ್ಯನವರು ಈ ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿದ್ದಾರೆ. ೬೫ ಮನೆಗಳನ್ನು ಸ್ಪಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಕಟ್ಟಿರತಕ್ಕಂಥವು. ಒಂದು ಮನೆಗೂ ಹಕ್ಕು ಪತ್ರ ಕೊಟ್ಟಿಲ್ಲ ಹಿಂದೆ ಕಟ್ಟಿದಂತಹ ಜನತಾ ಮನೆಗಳಿಗೆ ಮೂಂದುಗಡೆ ಉಳಿದಿರತಕ್ಕಂತಹ ಜಾಗಕ್ಕೆ ಗೋಡೆ ಕಟ್ಟಿ ಇದು ಒಂದು ಮನೆ ಎಂದು ಹೇಳಂತ್ತಿದ್ದಾರೆ ಇಂಥಾದ್ದು ೪೫ ಮನೆಗಳನ್ನು ಕಟ್ಟಿದ್ದಾರೆ. ಒಂದು ಲಕ್ಷ ರೂಪಾಯಿ ಬಿ. ಡಿ. ಜ. ರವರು ತಿಂದಿದ್ದಾರೆಂದು ನೇರವಾಗಿ ಆಪಾದನೆ ಮಾಡಿದ್ದೇನೆ, ನಾನು ಮುಖ್ಯ ಮಂತ್ರಿಗಳಿಗೆ ಬರೆದು ಕೊಟ್ಟ ಮೇಲೆ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿದ್ದಾರೆ. ಏನು ಸ್ಕೀಮ್‌ಗಳನ್ನು ತಾವು ಹಾಕುತ್ತಿದ್ದೀರಿ ರಿಲೀಫ್ ಕೆಲಸಕ್ಕೆ ಏನು ಹಣವನ್ನು ಕೊಡುತ್ತಿದ್ದೀರಿ ಅದು ನೇರವಾಗಿ ರೈತನಿಗೆ ಮುಟ್ಟುತ್ತಿದೆಯೇ ಎನ್ನುವುದನ್ನು ತಾವು ಮನಗಂಡಿದ್ದೀರಾ ?

ಇದರಲ್ಲಿ ನಿಮಗೆ ನಂಬಿಕೆ ಇದೆಯೇ ? ನೀವು ಯಾವುದೇ ಒಂದು ಇನ್‌ಸ್ಪೆಕ್ಷನ್ ಮಾಡಿದ್ದೀರಾ ? ಅನೇಕ ಕಡೆ ಪ್ರವಾಸ ಮಾಡಿದಾಗ ಎಲ್ಲಿಲ್ಲಿ ಕೆಲಸ ಮಾಡಿಲ್ಲ ಎಂದು ಕಣ್ಣಿಗೆ ಬೀಳುತ್ತದೆ ನೋಡಿ ಎಂದು ಹೇಳಿದ್ದೆ. ನನ್ನ ಕ್ಷೇತ್ರದಲ್ಲಿ ಒಂದು ವರ್ಷ ತುಮಕೂರಿನಿಂದ ಬೆಂಗಳೂರಿಗೆ ರಸ್ತೆ ಅದು ಪಿ.ಡಬ್ಲ್ಯೂ.ಡಿ ರಿಲೀಫ್ ವರ್ಕ್ಸ್‌ನಲ್ಲಿ ಆಗಬೇಕೆಂದಿದ್ದರೆ ಇನ್ನೊಂದು ಪಟ್ಟಿ ಬಂತು. ಇಂಥ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡಾ ಯಾವುದೇ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಹೋದರೆ ಕೇಂದ್ರ ಸರ್ಕಾರ ಹಣ ಕೊಡಬೇಕು, ಏತಕ್ಕೆ ಕೊಡುತ್ತದೆ ? ಇನ್ನೊಂದು ವಿಚಾರವನ್ನು ಹೇಳಂತ್ತೇನೆ. ಸೋಷಿಯಲ್ ಫಾರೆಸ್ಟ್ರಿ ಎಂದು ಸ್ಕೀಂಕೆ ರೋಡ್‌ನಲ್ಲಿ ಒಂದು ಕಡೆ ಗಿಡಗಳನ್ನು ಹಾಕಿದ್ದಾರೆ ಅದು ಕಾಡು ಬದನೆಗಿಡ ಅದು ಮೂರು-ನಾಲ್ಕು ವರ್ಷ ಇದ್ದರೆ ಹೆಚ್ಚಿಚ್ಚು. ಒಂದೊಂದು ಗಿಡಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಕೇಂದ್ರದಿಂದ ಗಿಡ ಹಾಕಲಿಕ್ಕೆ, ಮೂರು ವರ್ಷ ನೀರಂ ಹಾಕಲಿಕ್ಕೆ ಬೇಕಾದಷ್ಟು ಹಣವನ್ನು ಕೊಡುತ್ತದೆ. ಆದರಲ್ಲಿ ನೀವು ಕಾಡು ಬದನೆಗಿಡ ಬೆಳೆಯಲಿಕ್ಕೆ ಹಣ ಖರ್ಚು ಮಾಡಿದರೆ ಯಾರಾದರೂ ಕೇಂದ್ರ ಸರ್ಕಾರದವರು ಮಂತ್ರಿಗಳು ಬಂದು ಗಿಡಗಳನ್ನು ನೋಡಿದರೆ ಈ ಊರಿನಲ್ಲಿ ಈ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಸೋಷಿಯಲ್ ಫಾರೆಸ್ಟ್ರಿ ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ಯೋಚಿಸುವುದಿಲ್ಲವೇ ? ಕೇಂದ್ರ ಸರ್ಕಾರ ದುಡ್ಡು ಕೊಟ್ಟಿಲ್ಲವೇ ? ೫೧ ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಎಂದು ಒಂದು ಮಾತು ಕೂಡಾ ಬಂದಿಲ್ಲ. ಆರ್.ಎಲ್. ಇ.ಜಿ.ಪಿ.ಗೆ ಕೇಂದ್ರ ಸರ್ಕಾರದಿಂದ ನೂರು ರೂಪಾಯಿ ಆದರೂ ಕೂಡಾ ಬರತಕ್ಕಂಥ ಹಣ ಅದನ್ನು ರಿಲೀಫ್‌ನಲ್ಲಿ ಸೇರಿಸಿದ್ದಾರೆ. ಎಸ್.ಆರ್.ಇ.ಪಿ, ಹಣವನ್ನೂ ರಿಲೀಫ್‌ನಲ್ಲಿ ಸೇರಿಸಿದ್ದಾರೆ. ಸ್ಪೆಷಲ್ ಕಾಂಪೊನೆಂಟ್ ಇವೆಲ್ಲಾ ಕೇಂದ್ರದಿಂದ ಬರತಕ್ಕಂಥ ಹಣ. ಇಷ್ಟೊಂದು ಕೋಟಿ ರೂಪಾಯಿಂಗಳು ಕೇಂದ್ರದಿಂದ ಬರುತ್ತಿದ್ದರೂ ಕೂಡಾ ದುಡ್ಡು ಕೊಟ್ಟಿಲ್ಲ ಎಂದು ಹೇಳುತ್ತೀರಿ, ವಾಸ್ತವವಾಗಿ ನಾವು ಹೋದಸಾರಿ ನಮ್ಮ ಖಾರ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಬರ ಪರಿಹಾರ ವೀಕ್ಷಣೆ ಮಾಡಲಿಕ್ಕೆ, ಅದನ್ನು ನೋಡಲಿಕ್ಕೆ ನಮ್ಮ ಸಮಿತಿಯು ಕೆಲವು ಪ್ರೊಪೋಸಲ್ಸನ್ನು ಕೊಟ್ಟಿದ್ದೆವು. ಕೆಲವು ಸಲಹೆಗಳನ್ನು ಕೊಟ್ಟಿದ್ದೆವು. ಯಾವುದಾದರೂ ಒಂದು ಮಾಡಿದ್ದೀರಾ ಸ್ವಾಮಿ ? ಒಂದಾದರೂ ಸಲಹೆಯನ್ನು ತೆಗೆದುಕೊಂಡಿದ್ದೀರಾ ಸ್ವಾಮಿ ? ಯಾವುದೂ ಮಾಡಿಲ್ಲ. ಅಸೆಂಬ್ಲಿ ಕರೆದಿದೆ. ಸಬ್ಜೆಕ್ಟ್ ಆಗಿದೆ. ಮಾತನಾಡಬೇಕು, ಬಾಯಿ ಚಟ ತೀರಿಸಿಕೊಳ್ಳಬೇಕು. ಇಷ್ಟಕ್ಕೇ ಹೊರತು ಕಾರ್ಯಕ್ರಮಗಳು ಒಂದು ಕೂಡಾ ನ್ಯಾಯವಾಗಿ ಸೀಮಿತವಾಗಿ ನಡೆಯುತ್ತಿಲ್ಲ ಎನ್ನುವ ವಿಚಾರವನ್ನು ಹೇಳಿದರೆ ಅದು ತಪ್ಪಾಗಲಾರದು. ನನ್ನ ಕ್ಷೇತ್ರದಲ್ಲಿ ತುಮಕೂರು ಜಿಲ್ಲೆಯಲ್ಲಿ, ತಿಪಟೂರು ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಗುಬ್ಬಿ ಕೆಲವು ಕಡೆಗಳಲ್ಲಿ ತೆಂಗಿನ ಗಿಡ ಒಣಗುತ್ತಿವೆ. ಸುಮಾರು ೬೫ ಸಾವಿರ ಎಕರೆಗಳಷ್ಟು ತೆಂಗಿನ ಗಿಡ ಹಾಳಾಗುತ್ತಿದೆ. ೮೦-೧೦೦ ಕೋಟಿ ರೂಪಾಯಿಗಳು

ರೈತರಿಗೆ ನಷ್ಟವಾಗುತ್ತಿದೆ. ಮಾನ್ಯ ಲಕ್ಕಪ್ಪನವರು ಹೇಳಿದರು, ಚಂದ್ರಶೇಖರ್‌ರವರೂ ಹೇಳಿದರು. ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ ? ಏನೂ ಆಗಿಲ್ಲ. ಹೋದಸಾರಿ ೫೬ ಸಾವಿರ ಕೋಟಿ ರೂಪಾಯಿಗಳು ಬೇಕು ಎಂದು ಹೇಳಿದಾಗ ೫೪ ಸಾವಿರ ಕೋಟಿ ರೂಪಾಯಿ ಬಂದಾಗ ಎರಡು ಲಕ್ಷ ತೆಗೆಯಿರಿ, ಎರಡು ಲಕ್ಷ ಇನ್ನೊಂದರ ಸೇರಿಸಿದರೆ ಅಷ್ಟು ಬಿಟ್ಟರೆ ನೀವು ಕೊಟ್ಟಿರತಕ್ಕ ರಿಪೋರ್ಟ್ ನಿಜವಾಗಿಯೂ ಅಸಮರ್ಪಕವಾಗಿದೆ. ಎಷ್ಟು ಸಾವಿರ ಜನಕ್ಕೆ ಕೆಲಸ ಕೊಡುತ್ತೀರಿ ? ಇದರಲ್ಲಿ ಏನು ಹೇಳಿದ್ದೀರಿ ? ಎಷ್ಟು ಮ್ಯಾನ್‌ಡೇಸ್ ಕ್ರಿಯೇಟ್ ಆಗುತ್ತಿದೆ ಎನ್ನುವ ಅಂಕಿಅಂಶಗಳನ್ನು ಕೊಡಿ ಎಂದು ಹೇಳಿದರೆ ಏನು ಹೇಳುತ್ತೀರಿ ? ಕೇಂದ್ರದವರು ಬರುತ್ತಾರೆ, ಎಷ್ಟು ಲಕ್ಷ ಜನಕ್ಕೆ ಕೆಲಸ ಬೇಕು ಎಷ್ಟು ವ್ಯಾನ್‌ಡೇಸ್ ಬೇಕು ? ಎಷ್ಟು ಹಣ ಖರ್ಚಾಗುತ್ತಿದೆ ? ಎಂದು ಕೇಳಿದರೆ ಏನು ಹೇಳುತ್ತೀರಿ ? ಇದು ಇಲ್ಲದಿದ್ದರೆ ಕೇಂದ್ರದವರು ರಿಪೋರ್ಟನ್ನು ಹೇಗೆ ಒಪ್ಪಿಕೊಳ್ಳುತ್ತಾರೆ ? ಖಂಡಿತವಾಗಿ ಸಾಧ್ಯವಾಗುವುದಿಲ್ಲ. ಯಾವ ಯಾವ ವಿಷಯಗಳನ್ನು ಹೇಳುತ್ತೀರಿ ? ಅಥವಾ ಎಲ್ಲಿ ಕೆಲಸ ಮಾಡಲಿಕ್ಕೆ ಆಹಾರ ಬೇಕು. ನನ್ನ ತುಮಕೂರು ಜಿಲ್ಲೆಯನ್ನು ತೆಗೆದುಕೊಂಡರೆ, ತುಮಕೂರು ಜಿಲ್ಲೆಯ ಕೆಲವು ಭಾಗಗಳಿಗೆ ಮಧುಗಿರಿ ಸಬ್‌ಡಿವಿಷನ್ ಶಾಶ್ವತವಾಗಿ ಸಿ.ಪಿ.ಎ.ಪಿ. ಯೋಜನೆ ಮಂಜೂರಾಗಿದ್ದು ಯಾವುದೇ ಒಂದು ಶಾಶ್ವತವಾಗಿರತಕ್ಕಂಥ ಒಂದು ಯೋಜನೆಯನ್ನು ಅಲ್ಲಿ ಆಳವಡಿಸಿಕೊಂಡಿದ್ದಾರೆ, ಆದು ಆಗಿಲ್ಲ. ಎಲ್ಲಾ ತಾಲ್ಲೂಕುಗಳಲ್ಲೂ ಒಂದೊಂದು ಹೋಬಳಿಯಲ್ಲೂ ೫೦–೫೦ ಎಕರೆ ಗೋಮಾಳದಲ್ಲಿ ಶಾಶ್ವತವಾಗಿ ಹುಲ್ಲನ್ನು ಬೆಳೆಯತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಬೊಮ್ಮಾಯಿಯವರಿಗೆ ಹೇಳಿದ್ದೆ. ಅದು ಉದ್ಭವಿಸುವುದಿಲ್ಲ ಎಂದು ಹೇಳಿದರು. ಈ ಮೇವಿನ ಸಮಸ್ಯೆ ಬಂದಿದೆ ಇವತ್ತು. ಮೇವು ಎಲ್ಲಿ ದೊರೆಯುತ್ತದೆ ? ಆದನ್ನು ಇಂಪೋರ್ಟ್ ಮಾಡುವುದ ಕ್ಯಾಗುವುದಿಲ್ಲ. ೫೦–೫೦ ಎಕರೆಯಲ್ಲಿ, ಮೇವನ್ನು ಬೆಳೆಯಂತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿ ಎಂದು ಹೇಳಿದಾಗ, ಉದ್ಭವಿಸುವುದಿಲ್ಲ ಎಂದು ಹೇಳಿದರು. ಯಾವುದೂ ಉದ್ಭವಿಸುವುದಿಲ್ಲ.

೬–೦೦ ಪಿ.ಎಂ.

ಇವೊತ್ತಿನ ದಿವಸ ಏಕೆ ಇದನ್ನು ಡಿಸ್ಕಸ್ ಮಾಡಬೇಕು. ಶಾಶ್ವತವಾಗಿ ನಾಲ್ಕು ವರ್ಷಗಳಿಂದ ಬರಗಾಲ ಬಂದಿದೆ. ಮುಂದಿನ ವರ್ಷ ಕೂಡ ಬರುತ್ತದೆ ಎಂದು ನನಗೆ ಅನುಮಾನ ಬಂದಿದೆ. ಬರಗಾಲ ಏಕೆ ಬಂತು ಅನ್ನುವ ಪ್ರಶ್ನೆ ಸಹಜವಾಗಿ ಕೇಳುತ್ತೇನೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಬಹಳಷ್ಟು ದನಗಳು ಇವೊತ್ತಿನ ದಿವಸ ಬರಗಾಲದಿಂದ ಸಾಯುತಿವೆ. ಮೊನ್ನೆ ನಾನು ಜಿಲ್ಲಾ ಪರಿಷತ್‌ನಲ್ಲಿ ಹೇಳಿದೆ. ಇದಕ್ಕಾಗಿ ಶಾಶ್ವತವಾಗಿ ಒಂದೊಂದು ಹೋಬಳಿಗೆ ಇಷ್ಟು ಇಷ್ಟು ಎಕರೆ ಎಂದು ತೆಗೆದುಕೊಂಡು ಪರಿಹಾರ ಮಾಡಬೇಕು ಎಂದು. ಅವರು ಹಣ ಇಲ್ಲ ಎಂದರು. ಮೊನ್ನೆ ತಾನೇ ಹಣ ಬಿಡುಗಡೆ ಮಾಡಲಾಗಿದೆ ಎಂದು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ ಎಂದು ನಾನು ಕೇಳಿದೆ. ಆದಕ್ಕೆ ಅವರು ಹಣವನ್ನು ಬಿಡುಗಡೆ ಮಾಡಿದ್ದಾರೆ, ಆದರೆ ದುಡ್ಡು ಬಂದಿಲ್ಲ. ಬರಗಾಲವನ್ನು ಎದುರಿಸುವುದಕ್ಕೆ ಕೆಲವು ಕಡೆ ಹಣ ವಿತರಣೆ ಮಾಡಬೇಕಾಗುತ್ತದೆ. ಆಹಾರ ವಿತರಣೆ ಇದು ಕೇವಲ ಜನತಾ ಪಕ್ಷದ ಕಾರ್ಯಾಲಯಕ್ಕೆ ಮಾತ್ರ. ಜನತಾ ಪಕ್ಷದ ಅಧ್ಯಕ್ಷರ ಹತ್ತಿರ ಹೋಗಿ, ಅವರು ಹೇಳಿದರೆ ಮಾತ್ರ ಆಹಾರ ವಿತರಣೆ ಆಗುತ್ತದೆ. ಹರಿಯ ಕಾರ್ಡಿಗೂ ಇಲ್ಲ, ಯಾವುದಕ್ಕೂ ವಿತರಣೆ ಇಲ್ಲ, ಇವೊತ್ತಿನ ದಿವಸ ನನ್ನ ಕ್ಷೇತ್ರದಲ್ಲಿ ೩–೪ ಕಡೆ ಆಹಾರ ಬೇಕಾಗಿದೆ. ನನ್ನ ಮಂಡಲ್ ಪಂಚಾಯತ್‌ಗೆ ಆಹಾರ ಬೇಕು. ಅಧ್ಯಕ್ಷರು ಚೀಫ್ ಸೆಕ್ರೆಟರಿಗೆ ಬರೆದರೂ ಅವರು ನಮಗೆ ಗೊತ್ತಿಲ್ಲ ಅಂದರು. ಯಾರಿಂದ ಆಹಾರ ತರಿಸಿಕೊಳ್ಳಬೇಕೋ ಗೊತ್ತಿಲ್ಲ. ಇದು ಅರ್ಥವಾಗುತ್ತಿಲ್ಲ ಅಧ್ಯಕ್ಷರ ಹತ್ತಿರ ಹೋದರೆ, ವೈಸ್ ಪ್ರೆಸಿಡೆಂಟ್ ಹತ್ತಿರ ಹೋಗಿ ಎನ್ನುತ್ತಾರೆ. ಯಾವುದಕ್ಕೂ ಸರಿಯಾಗಿ ಉತ್ತರ ಇಲ್ಲ ಜನತಾ ಪಕ್ಷದವರಿಗೆ ಮಾತ್ರ ಅಲ್ಲಿ ಅನುಕೂಲವಾಗುತ್ತದೆ ಇವೊತ್ತಿನ ದಿವಸ ಆಹಾರ ಬೇಕು. ಆಹಾರದ ಕೂರತೆ ಇಲ್ಲ ಅದನ್ನು ನ್ಯಾಯವಾಗಿ ವಿತರಣೆ ಮಾಡುವ ವ್ಯವಸ್ಥೆ ಇಲ್ಲ. ಇದರಿಂದ ಬರಗಾಲದ ಪರಿಹಾರ ಹೇಗೆ ಮಾಡುವುದು ? ನಿಮ್ಮ ಜೊತೆ ನಾವು ಹೇಗೆ ಸಹಕಾರ ಮಾಡಬೇಕು ? ಹೀಗೆ ಮಾಡಿದರೆ ತಮಗೆ ಖಂಡಿತ ಸಹಕಾರ ಸಿಕ್ಕುವುದಿಲ್ಲ ಎಂದು ಅಧ್ಯಕ್ಷರ ಮೂಲಕ ತಮಗೆ ತಿಳಿಸಬಯಸುತ್ತೇನೆ ಶ್ರೀ ದೇವರಾಜ್ ಅರಸ್‌ರವರ ಅಧಿಕಾರ ಇದ್ದಾಗ ಮಧುಗಿರಿ, ದೊಡ್ಡೇರಿ ಹೋಬಳಿ ತವಣದಾಲ ಆ ಕವಲು ೧೨ ಸಾವಿರ ಗ್ಯಾಲನ್ ನೀರು ಬರುತ್ತಿದೆ ಕಳೆದ ೮ ವರ್ಷಗಳಿಂದ ೧೨ ಸಾವಿರ ಗ್ಯಾಲನ್ ನೀರು ಬಂದಿರುತ್ತೆ ಯಾರೂ ಉಪಯೋಗಿಸಿಕೊಂಡಿಲ್ಲ. ಇಲ್ಲಿ

ಸುಮಾರು ೩೦-೪೦ ಎಕರೆಗೆ ಆಗುವಷ್ಟು ಬೆಳೆ ಬೆಳೆಯಬಹುದು. ನಮ್ಮ ಗುಬ್ಬಿ ತಾಲ್ಲೂಕಿನ ಕೊಪ್ಪ ಪ್ರದೇಶದ ಹರಿಜನ ಕಾಲೋನಿಯಲ್ಲಿ ಒಂದು ಬೋರ್ ಇದೆ. ಇಲ್ಲಿ ೧೨ ಸಾವಿರ ಗ್ಯಾಲನ್ ನೀರು ಇದೆ. ೨-೩ ಸಾವಿರ ಜನ ಕುಡಿಯುವುದಕ್ಕೆ ಇದನ್ನು ಉಪಯೋಗ ಮಾಡುತ್ತಾರೆ. ಇದನ್ನು ಏಕೆ ಉಪಯೋಗಿಸಿಕೊಳ್ಳಬಾರದು. ಸರ್ಕಾರದವರು ದೊಡ್ಡ ಆಂಧೋಲನ ಮಾಡಿ ಸುಬಾಬುಲ್ ಬೆಳೆಯುವುದಕ್ಕೆ ಪ್ರಚಾರ ಮಾಡಿದರು. ನಾನು ಈ ವಿಷಯವನ್ನು ಹಲವಾರು ಸಾರಿ ಹೇಳಿದ್ದೇನೆ, ಇದನ್ನು ಬೆಳೆದರೆ ೧೦ ದನಗಳಿಗೆ ಕೂಡ ಮೇವು ಬರುವುದಿಲ್ಲ. ಲಕ್ಷಾಂತರ ರೂಪಾಯಿ ಇದಕ್ಕೋಸ್ಕರ ಖರ್ಚು ಮಾಡುತ್ತೀರಿ ನಿಮ್ಮ ಅಧಿಕಾರಿಗಳ ಬಗ್ಗೆ ನೀವು ವರದಿ ತರಿಸಿಕೊಂಡು ಏನಾದರೂ ಆಲ್ಟರ್‌ನೇಟೀವ್ ವ್ಯವಸ್ಥೆ ಮಾಡಬೇಕು. ಬರಗಾಲ ಪರಿಸ್ಥಿತಿಯಲ್ಲಿ ಕೇವಲ ಸರ್ಕಾರ ಅಂಕಿ ಅಂಶಗಳನ್ನು ನಮ್ಮ ಮುಂದೆ ಇಟ್ಟು, ನಾವು ರಿಪೋರ್ಟ್ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ, ಅವರು ಹಣ ಕೊಡುತ್ತಾರೆ, ಅದನ್ನು ನಿರೀಕ್ಷೆ ಮಾಡುತ್ತಿದ್ದೇವೆ ಎನ್ನುತ್ತಿದ್ದೀರಿ. ಅವರು ಹಣ ಕೊಟ್ಟೇ ಕೊಡುತ್ತಾರೆ, ನನಗೆ ಗೊತ್ತಿರುವ ರೀತಿಯಲ್ಲಿ ಬಹುಶಃ ೧೦-೧೫ ತಾಲ್ಲೂಕಿನಲ್ಲಿ ಬರಗಾಲ ಇದೆ. ಚಿಕ್ಕನಾಯಕನಹಳ್ಳಿಗೆ ಬಹುಶಃ ನಮ್ಮ ಪ್ರಧಾನ ಮಂತ್ರಿಯವರು ಬರಬಹುದು. ಅವರು ಬಂದ ಮೇಲೆ ಅವರು ಪರಿಸ್ಥಿತಿ ನೋಡಿ ಹಣ ಕೊಡುತ್ತಾರೆ. ಅಲ್ಲಿಯವರೆಗೆ ನೀವು ಕಾಯುತ್ತೀರಾ ? ಇವೊತ್ತಿನ ದಿನ ಏನಾಗಿದೆ, ಅಧಿಕಾರ ನಿಮ್ಮ ಕೈಗೆ ಬಂದ ಮೇಲೆ ದುಂದು ವೆಚ್ಚ ಜಾಸ್ತಿಯಾಗಿದೆ. ೧೦ ಜನ ಮಾಡುವ ಕೆಲಸವನ್ನು ೩೫ ಜನ ಮಾಡಂತ್ತಿದ್ದೀರಿ. ಇದರ ಜೊತೆಗೆ ೩೫ ಜನ ಜಿಲ್ಲಾ ಮಂತ್ರಿಗಳು. ಇಲ್ಲೂ ಕೆಲಸ ಇಲ್ಲ, ಅಲ್ಲೂ ಕೆಲಸ ಇಲ್ಲ. ಇಂತಹ ಬರಗಾಲದಲ್ಲಿ ವೆಚ್ಚಗಳನ್ನು ಕಡಿಮೆ ಮಾಡಬಹುದು. ಆದರೆ ಇಂತಹ ಬರಗಾಲದಲ್ಲಿಯೂ ಸಹ ಜಿಲ್ಲಾ ಪರಿಷತ್ ಅಧ್ಯಕ್ಷರು ೧೦-೧೨ ಸಾವಿರ ಟಿ.ಎ.ಡಿ.ಎ ಡ್ರಾ ಮಾಡಿರುವುದು ಪತ್ರಿಕೆಗಳಲ್ಲಿ ವರದಿ ಆಗಿರುವುದನ್ನು ನಾನು ಇವೊತ್ತಿನ ದಿವಸ ನೋಡಿದ್ದೇನೆ.

ಇಂತಹ ಬರಗಾಲ ಪರಿಸ್ಥಿತಿ ಇದ್ದರೂ ಸಹ ಜಿಲ್ಲಾಪರಿಷತ್ ಅಧ್ಯಕ್ಷರುಗಳು ತಿಂಗಳಿಗೆ ೧೦ ಸಾವಿರ ದಿಂದ ೧೨ ಸಾವಿರದವರೆಗೆ ಟಿ.ಎ. ಮತ್ತು ಡಿ.ಎ ತೆಗೆದುಕೊಂಡಿರುವ ಉದಾಹರಣೆಗಳು ಇವೆ. ನಿಮ್ಮ ಕಾಲದಲ್ಲಿ ಕೆಲವೊಂದು ಕಾನೂನುಗಳನ್ನು ಮಾಡಿದ್ದು ನಿಮ್ಮ ಪಕ್ಷದ ಜನರನ್ನು ಮಂತ್ರಿ ನಿಮ್ಮ ಪಕ್ಷದ ಶಾಸಕರನ್ನು ಪೋಷಣೆ ಮಾಡಲು ಮತ್ತು ಅವರನ್ನು ಸಂತೃಪ್ತಿಗೊಳಿಸುವ ಸಲುವಾಗಿ ಎಂದು ನಾನು ಹೇಳ ಬೇಕಾಗಿದೆ. ನಾನು ಒಬ್ಬ ಶಾಸಕನಾಗಿ ಯಾವುದೇ ಒಂದು ಹಳ್ಳಿಗೆ ಹೋದರೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಹೋಗಲಾಡಿಸಿ ಎಂದು ಜನರು ಕೇಳುತ್ತಾರೆ. ನಾನು ಮಾನ್ಯ ನಜೀರ್‌ಸಾಬ್ ಅವರಿಗೆ ಒಂದು ಪತ್ರ ಬರೆದು ನಮ್ಮ ಕ್ಷೇತ್ರದ ೧೬ ಹಳ್ಳಿಗಳಲ್ಲಿ ಹಾಗೂ ಹರಿಜನರು ವಾಸ ಮಾಡುವ ಕಡೆ ಇರುವಂತಹ ಕುಡಿಯುವ ನೀರಿನ ತೊಂದರೆಯನ್ನು ಬಗೆಹರಿಸಬೇಕೆಂದು ಕೇಳಿಕೊಂಡೆ. ಅವರು ಸಹ ಕೂಡಲೇ ಅದರ ಕಡೆ ಗಮನ ಹರಿಸಬೇಕೆಂದು ಅಧಿಕಾರಿಗಳಿಗೆ ಪತ್ರ ಬರೆದು ತಿಳಿಸಿದರು. ಆದರೆ ಆ ಸಮಸ್ಯೆ ಇನ್ನೂ ಬಗೆಹರಿಯಲಿಲ್ಲ. ಇವೊತ್ತಿಗೂ ಸಹ ನಮ್ಮಲ್ಲಿ ಮೇವಿನ ಸಮಸ್ಯೆ, ನೀರಿನ ಸಮಸ್ಯೆ ಮತ್ತು ಆಹಾರವಿತರಣೆ ಸಮಸ್ಯೆ ಇದ್ದೇ ಇದೆ. ಇವೊತ್ತು ನಮ್ಮ ರೈತರು ಕೊಟ್ಟ ತೆರಿಗೆ ಹಣ ಸರಿಯಾಗಿ ಉಪಯೋಗ ಆಗುತ್ತಿಲ್ಲ. ಸರ್ಕಾರದವರು ಒದಗಿಸುತ್ತಿರುವ ಆಹಾರಧಾನ್ಯಗಳು ಜನರಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಇದನ್ನು ವಂಧ್ಯವರ್ತಿಗಳೇ ಹೆಚ್ಚಾಗಿ ತಿಂದುಹಾಕುತ್ತಿದ್ದಾರೆ. ನಾನು ಈ ಹಿಂದೆ ಜನತಾ ಪಕ್ಷದಲ್ಲಿದ್ದಾಗ ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ಸುಮಾರು ಮೂರು ಸಾವಿರ ರೂಪಾಯಿಗಳಷ್ಟು ಬೆಲೆಬಾಳುವ ಗೋಧಿಯನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ನಾನು ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್ ಅವರ ಗಮನಕ್ಕೆ ತಂದಾಗ ಅವರು ಕೂಡಲೇ ಅಲ್ಲಿನ ಜಿಲ್ಲಾಧಿಕಾರಿಗಳನ್ನು ಟೆಲಿಫೋನ್ ಮೆಸೇಜ್ ಮೂಲಕ ಕರೆಸಿಕೊಂಡು ಈ ಬಗ್ಗೆ ತನಿಖೆ ಮಾಡುವಂತೆ ಹೇಳಿದರು. ಆದರ ಪ್ರಕಾರ ಕೇವಲ ೨೪ ಗಂಟೆಯೊಳಗಾಗಿ ತನಿಖೆ ಮಾಡಿದಾಗ ದುರುಪಯೋಗದ ಪ್ರಕರಣ ಪತ್ತೆ ಆಯಿತು. ನಂತರ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ೧೨ ಜನರ ಮೇಲೆ ಕೇಸ್ ಹಾಕಲಾಯಿತು. ಆದರೆ ಈ ೧೨ ಜನರು ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಬೆಂಗಳೂರಿಗೆ ಬಂದು ಹೈಕೋರ್ಟಿನಿಂದ ಪೋಲೀಸರು ತಮ್ಮನ್ನು ಅರೆಸ್ಟ್ ಮಾಡದಂತೆ ಜಾಮೀನು ಪಡೆದುಕೊಂಡರು. ಇವೊತ್ತಿನದಿವಸ ಆಡಳಿತದಲ್ಲಿ ಸಾಕಷ್ಟು ಭ್ರಷ್ಟಾಚಾರ ಇದೆ. ಭ್ರಷ್ಟಾಚಾರಕ್ಕೆ ಒಳಗಾದ ಅಧಿಕಾರಿಗಳನ್ನು ಏನಾದರೂ ಒಬ್ಬರು ಮಂತ್ರಿಗಳು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿದರೆ, ಆ ವರ್ಗವನ್ನು ಮುಖ್ಯಮಂತ್ರಿಗಳು ರದ್ದು ಮಾಡುತ್ತಾರೆ. ಇದು ಸರಿಯಲ್ಲ. ನಮ್ಮ ಮಾತಿಗೂ ನೀವು ಬೆಲೆ ಕೊಡಬೇಕು. ನೈತಿಕ ಹೊಣೆಗಾರಿಕೆ ಎಂಬುದು ನಮ್ಮ ಮೇಲೂ ಸಹ ಇದೆ.

ನಾವೂ ಸಹ ಜನರ ಮಧ್ಯೆ ಮಾನಮರ್ಯಾದೆಯಿಂದ ಬಾಳಬೇಕಾಗಿದೆ. ಈ ರಾಜ್ಯದಲ್ಲಿ ಕೇವಲ ನಿಮ್ಮ ಪಕ್ಷದ ಶಾಸಕರು ಮಾತ್ರ ಇಲ್ಲ. ಬೇರೆಬೇರೆ ಪಕ್ಷಗಳ ಶಾಸಕರು ಸಹ ಇದ್ದಾರೆಂಬುದನ್ನು ತಾವು ತಿಳಿದು ಕೊಂಡು ನಾವುಹೇಳಿದ ಮಾತಿಗೂ ನೀವು ಬೆಲೆ ಕೊಡಬೇಕು.ಕೇವಲ ನಿಮ್ಮ ಪಕ್ಷದವರು ಹೇಳುವ ಮಾತಿಗೆ ಬೆಲೆ ಕೊಡುವುದು ಸರಿಯಲ್ಲ. ಯಾವ ಅಧಿಕಾರಿಗಳು ಭ್ರಷ್ಟಾಚಾರದ ಮೂಲಕ ಲಕ್ಷಗಟ್ಟಲೆ ಹಣವನ್ನು ಸಂಪಾದನೆ ಮಾಡಿದ್ದಾರೋ,ಅಂತಹ ಅಧಿಕಾರಿಗಳ ಮೂಲಕವೇ ನೀವು ಕೆರೆಕಟ್ಟೆಗಳ ಕೆಲಸವನ್ನು ಮತ್ತು ರಸ್ತೆಗಳ ಕೆಲಸವನ್ನು ಮಾಡಿಸುತ್ತಿದ್ದೀರಿ.ಶಿವನಂಜಪ್ಪ ಏನಾದರೂ ಹೇಳಿಕೊಳ್ಳಲಿ ಎಂದುಕೊಂಡು ನೀವು ಇಂತಹ ಅಧಿಕಾರಿಗಳ ಮೂಲಕ ಬರಗಾಲ ಕಾಮಗಾರಿ ಕೆಲಸಗಳನ್ನು ಮಾಡಿಸಲುಕೇಂದ್ರದ ನೆರವನ್ನು ಕೇಳಿದರೆ ನಿಮಗೆ ಕೋಟಿಗಟ್ಟಲೆ ಹಣವನ್ನು ಯಾರುತಾನೇ ಕೊಡುತ್ತಾರೆ?ನೀವು ಕೇಳಿದಷ್ಟುಹಣವನ್ನು ಹೇಗೆ ಕೊಡುವುದು ? ಈಗ ನೀವು ತಯಾರಿಸಿರುವ ವರದಿ ಸಹ ಸರಿಯಾಗಿಲ್ಲ. ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಕೆಲಸಗಳಾಗಬೇಕಾಗಿದೆ ಎಂಬುದರ ಕಲ್ಪನೆಯೂ ಸಹ ನಿಮಗೆ ಇಲ್ಲ. ಈ ವರದಿ ತಯಾರಿಸುವ ಮೊದಲು ನಮ್ಮ ಬಳಿಯಿಂದ ಅಧಿಕಾರಿಗಳು ಯಾವ ವಿವರಗಳನ್ನು ಸಹ ಪಡೆದುಕೊಳ್ಳಲಿಲ್ಲ. ಕೇವಲ ಅಧಿಕಾರಿಗಳು ಕೊಟ್ಟ ವಿವರಗಳ ಮೇಲೆ ಈ ವರದಿ ತಯಾರು ಮಾಡಿದ್ದೀರಿ. ಇದು ಸರಿಯಲ್ಲ. ಕೊನೆಯಪಕ್ಷ ನೀವು ಜಿಲ್ಲಾಪರಿಷತ್‌ಗಳ ಅಧ್ಯಕ್ಷರುಗಳ ಮೂಲಕವಾದರೂ ವರದಿಗಳನ್ನು ತರಿಸಿಕೊಳ್ಳ ಬಹುದಾಗಿತ್ತು. ಅಧಿಕಾರಿಗಳು ನಿಮಗೆ ಒದಗಿಸುವ ಅಂಕಿಅಂಶಗಳು ಸರಿಯಾಗಿಲ್ಲವೆಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಕಳೆದ ಸಲ ಮಾನ್ಯ ಖಾರ್ಗೆ ಅವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿ ಪ್ರವಾಸದಲ್ಲಿದ್ದಾಗ ಒಂದು ಕಡೆ ಬರಗಾಲ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಎಷ್ಟು ಜನರಿಗೆ ಕೆಲಸ ಒದಗಿಸಿದ್ದೀರಿ ಎಂಬ ವಿವರಗಳನ್ನು ಅಲ್ಲಿನ ಅಧಿಕಾರಿಗಳ ಹತ್ತಿರ ಕೇಳಿದಾಗ, ಅವರು ಕೊಟ್ಟ ಅಂಕಿಅಂಶಗಳು ಒಂದಕ್ಕೊಂದು ಹೊಂದಾಣಿಕೆ ಆಗಲಿಲ್ಲ. ಈಗಲೂ ಸಹ ನೀವು ಈ ವರದಿಯನ್ನು ಬಹಳ ಆತುರದಿಂದ ತಯಾರು ಮಾಡಿದ್ದೀರಿ. ಈ ಒಂದು ವರದಿಗೆ ಯಾವ ಎಸ್‌ಡಮ್ ಇಲ್ಲ. ಯಾವ ರಿಯಾಲಿಟಿಯೂ ಇಲ್ಲ. ೩೧ನೇ ತಾರೀಖು ವಿಧಾನಮಂಡಲದ ಮುಂದೆ ವರದಿ ಮಂಡಿಸಲು ೨೯ನೇ ತಾರೀಖು ನೀವು ಟೆಲಿಗ್ರಾಂ ಕೊಟ್ಟು ವಿವರಗಳನ್ನು ಕಳುಹಿಸಿಕೊಡಿ ಎಂದರೆ, ಅವರು ಯಾವ ರೀತಿ ಕಳುಹಿಸಿಕೊಡುತ್ತಾರೆ ? ಇಂತಹ ಸಂದರ್ಭಗಳಲ್ಲಿ ಅವರು ಹೋದವರ್ಷದ ವರದಿಯನ್ನೇ ಆಧಾರವಾಗಿಟ್ಟುಕೊಂಡು, ಕೆಲವು ಕಡೆಗಳಲ್ಲಿ ಎರಡು ಮೂರು ಲಕ್ಷದಷ್ಟು ಕಡಿಮೆ ಮಾಡಿ ಇಲ್ಲವೇ ಜಾಸ್ತಿ ಮಾಡಿ ನಿಮಗೆ ಕಳುಹಿಸಿಕೊಡುತ್ತಾರೆ ? ಇಂತಹ ಒಂದು ವರದಿಗೆ ನಾವು ಹೆಚ್ಚಿನ ಬೆಲೆ ಕೊಡುವುದಕ್ಕಾಗುವುದಿಲ್ಲ. ಇವೊತ್ತಿನದಿವಸ ಆಡಳಿತದಲ್ಲಿ ಬಿಗಿ ಇಲ್ಲವಾಗಿದೆ. ನಾವು ಬಸ್‌ನಲ್ಲಿ ಪ್ರಯಾಣ ಮಾಡುವಾಗಲ್ಲೆಲ್ಲಾ, ಆ ಬಸ್‌ನಲ್ಲಿರುವ ಅಧಿಕಾರಿಗಳು ಮತ್ತು ನೌಕರರು ತಮ್ಮ ವರ್ಗದ ಬಗ್ಗೆ ಮಾತನಾಡಿಕೊಳ್ಳುತ್ತಿರುತ್ತಾರೆ. ವರ್ಗಕ್ಕಾಗಿ ನಾನು ಇಂತಹ ಎಂ.ಎಲ್ ಏ ಹತ್ತಿರ ಹೋಗಿದ್ದೆ, ತಾನು ಇಂತಹ ಮಂತ್ರಿ ಹತ್ತಿರ ಹೋಗಿದ್ದೆ ಎಂದು ಮಾತನಾಡಿಕೊಳ್ಳುವುದನ್ನು ನಾನು ಕೇಳಿದ್ದೇನೆ. ಇವರ ಮಾತುಗಳನ್ನು ಕೇಳಿದ ಜನರು ಸಹ ಈಗ ನಮ್ಮ ರಾಜ್ಯದಲ್ಲಿರುವುದು ಜನತಾ ಸರ್ಕಾರ ಅಲ್ಲ, ಟ್ರಾನ್ಸ್‌ಫರ್ ಸರ್ಕಾರ ಎಂದು ಹೇಳುವುದನ್ನು ಸಹ ನಾನು ಕೇಳಿದ್ದೇನೆ. ಕೇವಲ ಅಧಿಕಾರಿಗಳ ಟ್ರಾನ್ಸ್‌ಫರ್‌ಗೋಸ್ಕರ ಈ ಸರ್ಕಾರ ಅಧಿಕಾರದಲ್ಲಿರಬೇಕೇ ಅಥವಾ ಜನರ ಕಲ್ಯಾಣಕ್ಕೋಸ್ಕರ ಇರಬೇಕೇ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ ? ಸರ್ಕಾರದವರು ಬರಗಾಲದ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು ಮತ್ತು ಎಲ್ಲಾ ಕಡೆಗಳಿಂದಲೂ ಮಾಹಿತಿಗಳನ್ನು ತರಿಸಿಕೊಳ್ಳ ಬೇಕು. ಎಲ್ಲಾ ಕಡೆಗಳಲ್ಲಿಯೂ ಕೂಡಲೇ ಬರಗಾಲದ ಕಾಮಗಾರಿ ಕೆಲಸಗಳು ಪ್ರಾರಂಭವಾಗಬೇಕು ಬರಗಾಲದ ಕಾಮಗಾರಿಗಳೆಂದು ೭ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಒಬ್ಬರು ಮಂತ್ರಿಗಳು ಹೇಳಿಕೆ ಕೊಟ್ಟರೆ ಮತ್ತೊಬ್ಬರು ೮ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡ ಲಾಗಿದೆ ಎಂದು ಹೇಳುತ್ತಾರೆ ? ನಾವು ಯಾರ ಮಾತನ್ನು ನಂಬುವುದು? ನಾನು ನನ್ನ ಕ್ಷೇತ್ರದ ಯಾವುದೇ ಊರಿಗೆ ಹೋದರೂ ಸಹ ಅಲ್ಲಿ ನೂರಾರು ಜನರು ನನ್ನ ಬಳಿ ಬಂದು ತಮ್ಮತಮ್ಮ ಊರಿನಲ್ಲಿ ಬರಗಾಲದ ಕೆಲಸಗಳನ್ನು ಕೈಕೊಳ್ಳ ಬೇಕೆಂದು ಕೇಳುತ್ತಿದ್ದಾರೆ.

ಜಿಲ್ಲಾ ಪರಿಷತ್ ಅಧ್ಯಕ್ಷರ ಹತ್ತಿರ ಹೋದರೆ ನಮಗೆ ಹಣ ಬಂದಿಲ್ಲ ಎಂದು ಹೇಳುತ್ತಾರೆ. ಇದು ನಿಜವಾದ ಪರಿಸ್ಥಿತಿ. ಇವತ್ತಿನದಿವಸ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಒಳ್ಳೆಯ ಒಂದು ಸಲಹೆ ಕೊಟ್ಟರು ನಮ್ಮ ಹತ್ತಿರ ಹಣ ಇಲ್ಲ ಎಂದು. ಅದನ್ನು ಒಪ್ಪಿಕೊಳ್ಳೋಣ, ಆದರೆ ಹಣ ಇಲ್ಲದೇ

ಹೋದರೆ ಸುಳ್ಳು ಹೇಳಿಕೆ ಏಕೆ ಕೊಡುತ್ತಿದ್ದೀರಿ ? ಮಾನ್ಯ ವೀರಣ್ಣನವರು ನಮ್ಮ ರಾಜ್ಯದಲ್ಲಿ ಹಣ ಕಾಸಿನ ಪರಿಸ್ಥಿತಿ ಸುಭದ್ರವಾಗಿದೆ ಬೇಕಾದಷ್ಟು ಕೆಲಸ ಕೊಡುತ್ತೇವೆ ಎಂದು ಹೇಳುತ್ತಾರೆ. ಆ ಹೇಳಿಕೆ ಬಂದ ಪೇಪರನ್ನು ಹಿಡಿದುಕೊಂಡು ಮಂತ್ರಿಗಳಾದ ವೀರಣ್ಣನವರು ಈ ರೀತಿ ಹೇಳಿದ್ದಾರೆ. ನೀವು ನಮಗೆ ಕೆಲಸ ಕೊಡಿಸುವುದಿಲ್ಲವೇ ಎಂದು ಆಪಾದನೆಗಳನ್ನು ಮಾಡುತ್ತಾರೆ. ಈ ವಿಚಾರವನ್ನು ಆ ಕಡೆ ಇರತಕ್ಕಂಥ ಎಂ. ಎಲ್. ಎ. ಗಳೂ ಒಪ್ಪಿಕೊಳ್ಳುತ್ತಾರೆಂದು ತಿಳಿದಿದ್ದೇನೆ. ನಮ್ಮಲ್ಲಿ ಆಹಾರ ಇಲ್ಲ, ಹುಲ್ಲೂ ಇಲ್ಲ, ಹುಲ್ಲು ಕೊಳ್ಳುವುದಕ್ಕೆ ಹಣ ಇಲ್ಲ, ಆಹಾರ ಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವಂಥ ಕಾಲದಲ್ಲಿ ಇಂದಿರಾ ವಿಕಾಸ ಪತ್ರ ತಲೆ ಮೇಲೆ ಬಂದುಬಿಟ್ಟಿದೆ ಯಾವುದೇ ಲೈಸನ್ಸ್ ತೆಗೆದುಕೊಳ್ಳುವುದಕ್ಕೆ ಹೋದರೂ ೫೦–೧೦೦ ರೂಪಾಯಿಗಳನ್ನು ಕೊಡಿ ಎಂದು ಹೇಳುತ್ತಾರೆ. ತಹಶೀಲ್ದಾರ್ ಹತ್ತಿರ ಹೋದರೆ ಅವರು ಹೆಡ್ ಆಫೀಸ್‌ನಲ್ಲಿ ಇರುವುದಿಲ್ಲ ಅವರು ಎಲ್ಲಿ ಎಂದರೆ ಇಂದಿರಾ ವಿಕಾಸ ಪತ್ರಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ ಪಹಣಿ ಬರೆಸಬೇಕಾದರೆ ಇಂದಿರಾ ವಿಕಾಸ ಪತ್ರ ತೆಗೆದುಕೊಳ್ಳಬೇಕು ಒಂದು ಖಾತೆ ಬದಲಾಯಿಸ ಬೇಕಾದರೆ ಎರಡು ಮೂಟೆ ಸಿಮೆಂಟ್ ತೆಗೆದುಕೊಳ್ಳಬೇಕಾದರೆ ಇಂದಿರಾ ವಿಕಾಸ ಪತ್ರ ತೆಗೆದುಕೊಳ್ಳಬೇಕು. ಬರಗಾಲದಲ್ಲಿ ಈ ರೀತಿ ಏಕೆ ಒತ್ತಾಯ ಮಾಡುತ್ತೀರಿ ? ಈ ಸ್ಕೀಂ ಮಾಡಿದ್ದೀರಿ ಅನುಕೂಲ ಇದ್ದವರೂ ಕೊಡುತ್ತಾರೆ. ಅನುಕೂಲ ಇಲ್ಲದೇ ಇರುವವರಿಗೂ ಕೂಡ ಕಂಪಲ್‌ಷನ್ ಮಾಡಬೇಡಿ ಮತ್ತೆ ಸೊಸೈಟಿ ಸಾಲಗಳು. ಯಾವುದೇ ರೈತರ ಆಸ್ತಿಯನ್ನು ಹರಾಜು ಮಾಡಿಸುವುದಿಲ್ಲ ಎಂದು ಸರ್ಕಾರದವರು ಹೇಳುತ್ತಾರೆ.

ಶ್ರೀ ವೀರಣ್ಣ.—ಮಾನ್ಯ ಸದಸ್ಯರು ಸ್ವಲ್ಪ ಈಲ್ಕ್ ಆದರೆ ಎರಡು ಮಾತಗಳನ್ನು ಹೇಳುತ್ತೇನೆ. ಮಾನ್ಯ ಶಿವನಂಜಪ್ಪನವರು ತಪ್ಪು ತಿಳಿದುಕೊಂಡಿದ್ದಾರೆ. ಇದು ನಮ್ಮ ಸ್ಕೀಂ ಅಲ್ಲ ಇದು ಕೇಂದ್ರ ಸರ್ಕಾರದ ಯೋಜನೆ ಬಹುಶಃ ಅವರು ಶ್ಲಾಘನೆ ಮಾಡಬೇಕು. ಕರ್ನಾಟಕ ಸರ್ಕಾರವನ್ನು ಮಾನ್ಯ ಸದಸ್ಯರೆಲ್ಲರೂ ಶ್ಲಾಘನೆ ಮಾಡಬೇಕು, ಕಾರಣ ಏನೆಂದರೆ ಯಾವುದೇ ರಾಜ್ಯದಲ್ಲಿ ಈ ರೀತಿ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಇಂದಿರಾ ವಿಕಾಸ ಪತ್ರ ಯೋಜನೆಯನ್ನು ಇಷ್ಟೊಂದು ಇಂಟೆನ್ಸೀವಾಗಿ ಮಾಡಿ ಕೇಂದ್ರ ಸರ್ಕಾರಕ್ಕೆ ಒಳ್ಳೆಯ ಹೆಸರು ತರತಕ್ಕ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಶ್ಲಾಘನೆ ಮಾಡ ಬೇಕು. ಭಾರತ ಸರ್ಕಾರ ಈ ಯೋಜನೆಯನ್ನು ಮಾಡಿರತಕ್ಕಂಥಾದ್ದು ಇದು ರಾಷ್ಟ್ರ ಮತ್ತು ರಾಜ್ಯದ ಅಭ್ಯುದ್ಧಿಗೋಸ್ಕರ ಯಾರು ಈ ದೇಶದಲ್ಲಿ ಜನ್ಮ ತಾಳುತ್ತಾರೆ ಅವರಿಂ ಈ ರಾಷ್ಟ್ರದ ಸೇವೆಯನ್ನು ಮಾಡಬೇಕು, ಹುಟ್ಟಿದ್ದಕ್ಕೆ ಋಣ ತೀರಿಸಬೇಕು, ತಾನು ದುಡಿದಂಥ ಹಣದಲ್ಲಿ ಸ್ವಲ್ಪ ಭಾಗವನ್ನು ೫–೬ ವರ್ಷ ಅವಧಿಯಲ್ಲಿ ಇಟ್ಟು ತನ್ಮೂಲಕ ರಾಷ್ಟ್ರ ಸೇವೆ ಮಾಡತಕ್ಕಂಥ ಭಾವನೆ' ಬರಲಿ ಎಂಬ ದೃಷ್ಟಿ ಯಿಂದ ಕೇಂದ್ರ ಸರ್ಕಾರದವರು ಈ ಯೋಜನೆ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಈ ಯೋಜನೆ ಯನ್ನು ಮಾಡದೇ ಇದ್ದಿದ್ದರೆ ನಮ್ಮ ಆಪ್ತ ಆಣೆಗೂ ಈ ದಿಸೆಯಲ್ಲಿ ನಾವು ಹೋಗುತ್ತಿಲ್ಲಿ ಕೇಂದ್ರ ಸರ್ಕಾರದವರು ಆಗಿಂದಾಗ್ಗೆ ಕಾಗದ ಬರೆಯುತ್ತಿದ್ದಾರೆ. ಏನೆಂದರೆ ನೀವು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಈ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೀರಿ, ಗ್ರಾಮಾಂತರ ಪ್ರದೇಶಗಳಿಗೆ ನೀವು ಹೋಗುತ್ತಾ ಇಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಉಳಿತಾಯ ಮನೋಭಾವ ವನ್ನು ಬೆಳೆಸಿ, ಮತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಅನೇಕ ಮುಗ್ಧ ಜನರು ಖಾಸಗಿ ಸಂಸ್ಥೆಗಳಲ್ಲಿ ಹೋಗಿ ಹಣ ತೊಡಗಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಆದಿತ್ಯ ಫೈನಾನ್ಸ್‌ನವರು ೧೮ ಕೋಟಿಗೆ ನಾಮ ಹಾಕಿ ಹೋದರು. ಅದೇರೀತಿ ಪಿಯರ್ಲೆಸ್ ಸಂಸ್ಥೆ ಇದೆ. ಇಂಥವುದ್ದಕ್ಕೆಲ್ಲಾ ಹಣ ಹಾಕಿ ಹಾಳಾಗಿ ಹೋಗುತ್ತಿದ್ದಾರೆ ಎಂದು ಈ ಯೋಜನೆಗಳನ್ನು ಮಾಡಿದ್ದಾರೆ. ಇಂದಿರಾ ವಿಕಾಸ ಪತ್ರ ಯೋಜನೆಗೆ ಹೆಚ್ಚು ಪ್ರಚಾರ ಏಕೆ ಕೊಡುತ್ತಿದ್ದೇವೆಂದರೆ ಯಾವುದೇ ಬ್ಯಾಂಕ್‌ನಲ್ಲಿ ಅಷ್ಟು ಬಡ್ಡಿ ಕೊಡುತ್ತಾ ಇಲ್ಲ. ಬ್ಯಾಂಕ್‌ನಲ್ಲಿ ೧೦ ಪರ್ಸೆಂಟ್ ಬಡ್ಡಿ ಕೊಡುತ್ತಾರೆ. ಇಂದಿರಾ ವಿಕಾಸ ಪತ್ರ ಯೋಜನೆಯಲ್ಲಿ ಹದಿನೆಂಟೂವರೆ ಪರ್ಸೆಂಟ್ ಹಣ ಬರುತ್ತದೆ. ಐದೂವರೆ ವರ್ಷದಲ್ಲಿ ಹಣ ದ್ವಿಗುಣವಾಗುತ್ತದೆ. ಈಗ ಹೊಸದಾಗಿ ಒಂದು ಯೋಜನೆ ಮಾಡಿದ್ದಾರೆ, ಮಾಸಿಕ ವರಮಾನ ಯೋಜನೆ ಎಂದು ಮಾಡಿದ್ದಾರೆ. ಅದಕ್ಕೆ ೧೨ ಪರ್ಸೆಂಟ್ ಬಡ್ಡಿ ಕೊಡುತ್ತಾರೆ ಒಳ್ಳೆಯ ಕೆಲಸಕ್ಕೆ ಬಲವಂತ ಮಾಡಿದರೆ ತೊಂದರೆಯಾಗುವುದಿಲ್ಲ. ಅದಕ್ಕಾಗಿ ಹಣ ಉಳಿಸಿದರೆ ನಾಳೆ ಅವರ ಭವಿಷ್ಯಕ್ಕೇ ಅನುಕೂಲವಾಗುತ್ತದೆ ಅದರ ಜೊತೆಗೆ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅನುಕೂಲವಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಕೊರಟಗೆರೆ ತಾಲ್ಲೂಕಿಗೆ ಹೋಗಿದ್ದೆ. ಸುಮಾರು ನೂರಂ ಜನ ಒಂದೂ ಜೇಳಿದರು. ೫೦ ರೂಪಾಯಿ ವೃದ್ಧಾಪ್ಯ ವೇತನ ತಿಂಗಳಿಗೆ ಕೊಡತಕ್ಕಂಥಾದ್ದು, ಈ ೫೦

ರೂಪಾಯಿ ವೈದ್ಯಾಧ್ಯಕ್ಷ ವೇತನ ತೆಗೆದುಕೊಳ್ಳುವವರಿಗೆ ಇಂದಿರಾ ವಿಕಾಸ ಪತ್ರ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀ ವೀರಣ್ಣ.—ಮಾನ್ಯ ಶಿವನಂಜಪ್ಪನವರೆ, ಸುಳ್ಳು ಹೇಳಬೇಡಿ. ಈ ನಾಲಿಗೆಗೆ ಮೂಳೆ ಇಲ್ಲ ವೈದ್ಯಾಧ್ಯಕ್ಷವೇತನಕ್ಕೆ ಕೊಡುವ ಹಣವನ್ನು ಇಂದಿರಾ ವಿಕಾಸ ಪತ್ರದಲ್ಲಿ ತೊಡಗಿಸಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ —ಶಹಶೀಲ್ದಾರ್, ಬಿ.ಡಿ.ಓ.ಗಳಿಗೆ ಇಂತಿಷ್ಟು ಎಂದು ಗೊತ್ತು ಮಾಡಿದ್ದೀರಿ. ಅವರುಗಳು ಯಾವುದೇ ಲೈಸೆನ್ಸ್ ಕೊಡಬೇಕಾದರೂ ಇಂತಿಷ್ಟು ಇಂದಿರಾ ವಿಕಾಸ ಪತ್ರದಲ್ಲಿ ಹಣ ಹಾಕಬೇಕೆಂದು ಹೇಳುತ್ತಾರೆ. ಇವತ್ತು ಮಾನ್ಯ ಜಾಲಪ್ಪನವರನ್ನು ನಾನು ಶ್ಲಾಘನೆ ಮಾಡಬೇಕಾಗಿದೆ,

ಅಧ್ಯಕ್ಷರು —ತಾವು ಮುಕ್ತಾಯ ಮಾಡಿ ಮೊದಲು ಚನ್ನಾಗಿ ಮಾತನಾಡಿದಿರಿ, ಈಗ ಹಳಿ ತಪ್ಪಿದ್ದಿರಿ.

ಶ್ರೀ ಜಿ.ಎಸ್. ಶಿವನಂಜಪ್ಪ.—ಸ್ವಾಮಿ, ಬಲವಂತದಿಂದ ತೆಗೆದುಕೊಳ್ಳುವುದು ಬೇಡ ಅವರಾಗಿಯೇ ತೆಗೆದುಕೊಳ್ಳುವುದಕ್ಕೆ ಮುಂದೆ ಬಂದರೆ, ಕೊಡಲಿ ನಾನು ಸಾಮಾನ್ಯವಾಗಿ ಅಂಗಡಿಗೆ ಹೋಗುವುದಿಲ್ಲ ಮೊನ್ನೆ ಗುಬ್ಬಿಯಲ್ಲಿ ಒಂದು ಅಂಗಡಿಗೆ ಹೋಗಿದ್ದೆ ಅವನು ಜಾಲಪ್ಪನವರ ಫೋಟೋ ಹಾಕಿಕೊಂಡಿದ್ದ...

ಅಧ್ಯಕ್ಷರು.—ನಿಮ್ಮ ಗಾಡಿ ಹಳಿ ತಪ್ಪುತ್ತಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಕೊಳ್ಳುವವರಿಂದಲೂ ಮಾರಾಟ ಮಾಡುವವರಿಂದಲೂ ಕಮೀಷನ್ ವಸೂಲು ಮಾಡುವಂತೆ ಮಾಡಿರುವುದರಿಂದ, ಎರಡಕ್ಕೂ ಆದಾಯ ಬರುತ್ತದೆಂದು ಅಂಗಡಿಯವನು ಹೇಳಿದ. ಇದಕ್ಕಾಗಿ ಮಾನ್ಯ ಜಾಲಪ್ಪನವರಿಗೆ ಶಹಬಾಷಗಿರಿ ಕೊಡಬೇಕಾಗುತ್ತದೆ. ಕಳ್ಳ ದಂಡು ಯಾರಿಟ್ಟಿದ್ದಾರೆ, ಕಳ್ಳತನದಲ್ಲಿ ಯಾರು ಸಂಪಾದನೆ ಮಾಡುತ್ತಾರೆ ಅಂತವರು ಪರ್ಚೇಸ್ ಮಾಡುತ್ತಾರೆ. ಬಡವರು, ಮಾಶಾಸನ ಪಡೆಯುವವರಿಂದ ಮಾಡುವುದು ಸರಿಯಲ್ಲ. ಅಧಿಕಾರಿಗಳು ಕೂಡ ಈ ವಿಚಾರದಲ್ಲಿ ಸಹಕಾರವನ್ನು ಕೊಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಅಧ್ಯಕ್ಷರು.—ಚರ್ಚೆ ಇವತ್ತು ಮುಕ್ತಾಯವಾಯಿತು ಮಳೆ ಮುಂದುವರಿಯುವುದು. ಈಗ ಮಾನ್ಯ ಮುಖ್ಯಮಂತ್ರಿಯವರು ರಷೀದ್ ಸಾವಿನ ಬಗ್ಗೆ ಹೇಳಿಕೆ ಕೊಡುತ್ತಾರೆ.

ಮುಖ್ಯಮಂತ್ರಿಯವರಿಂದ ಹೇಳಿಕೆ

ಕೇರಳದ ವಕೀಲ ಶ್ರೀ ರಷೀದ್‌ರವರ ನಿಘೂಢ ಸಾವಿನ ಬಗ್ಗೆ ಸಿ.ಬಿ.ಐ,ನಿಂದ ತನಿಖೆಯ ಪ್ರಕಟಣೆ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ. ನಾನು ಈಗ ಹೇಳಿಕೆ ಕೊಡುವುದಕ್ಕೆ ಬಯಸುವುದಿಲ್ಲ. ಸುಮಾರು ೩ ಗಂಟೆಗಳ ಹಿಂದೆ ವಕೀಲ ಸಂಘದವರು ನನ್ನನ್ನು ಭೇಟಿಯಾಗಲಿಕ್ಕೆ ಬಂದಿದ್ದರು. ಅವರ ಪ್ರತಿನಿಧಿಗಳನ್ನು ಭೇಟಿ ಮಾಡಿ ಸುಮಾರು ಮುಕ್ಕಾಲು ಗಂಟೆ ಮಾತನಾಡಿ, ಸರ್ಕಾರದ ವತಿಯಿಂದ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಅವರಿಗೆ ಮನವರಿಕೆ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡಿದ್ದೇನೆ ಇದರ ಬಗ್ಗೆ ಸತ್ಯ ಏನು ಎನ್ನುವುದನ್ನು ಹೊರಗಡೆ ತೆಗೆಯಬೇಕು ಇದರಲ್ಲಿ ಯಾವುದನ್ನು ಮುಚ್ಚುತಕ್ಕಂಥ ಪ್ರಶ್ನೆ ಇಲ್ಲ. ಈ ವಿಷಯವನ್ನು ಯಾರು ಕೇಳುವುದಕ್ಕೆ ಮೊದಲೇ ವೈಯಕ್ತಿಕವಾಗಿ ನಾನೇ ಕೇಂದ್ರ ಸರ್ಕಾರದ ಸಿ.ಬಿ.ಐ. ಮುಂಖಾಂತರ ತನಿಖೆ ಮಾಡಿಸಬೇಕೆಂದು ನಿರ್ಧಾರ ತೆಗೆದುಕೊಂಡು ಕೇಂದ್ರದ ಗೃಹ ಮಂತ್ರಿಯವರಿಗೆ ನಿನ್ನೆ ದಿವಸವೇ ಟೆಲೆಕ್ಸ್ ಮುಖಾಂತರ ತಿಳಿಸಿದ್ದೇನೆ. ಪತ್ರ ಕೂಡ ಬರೆದಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗಿದೆ. ನಮ್ಮ ದೇಶದ ಇತಿಹಾಸದಲ್ಲಿ ಬಹುಶಃ ಒಬ್ಬ ಗೃಹಮಂತ್ರಿಯಮೇಲೆ ಇನ್ಸ್‌ನಿಯೇಷನ್ ಮಾಡಿದ್ದಾರೆ ಆದರೆ, ಇವತ್ತು ಇಲ್ಲಿ